# ಕಾವ್ಯ ಲಹರಿ



ಮಡಿಕೇರಿ ದಸರಾ ಬಹುಭಾಷಾ ಕವಿಗೋಷ್ಠಿ ಸಮಿತಿ - 2012

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ

# ಕಾವ್ಯ ಲಹರಿ

(ಬಹುಭಾಷಾ ಕವನ ಸಂಕಲನ)

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ

ಮಡಿಕೇರಿ ಜನೋತ್ಸವ

ದಸರಾ ಬಹುಭಾಷಾ ಕವಿಗೋಷ್ಠಿ ಸಮಿತಿ - ೨೦೧೨

೨೧-೧೦-೨೦೧೨

**KAVYA LAHARI**

An anthology of poems published by Karnataka Kodava Sahithya Academy, Madikeri.

First Edition : 2012

All Rights Reserved

Price : ₹ 30/-

ಬೊಳಿಪಡ್ತನವು
ರಿಜಿಸ್ಟ್ರಾರ್
ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ
ಸ್ಕ್ಯಾಟ್ ಭವನ, ಮ್ಯಾನ್ಸ್ ಕಾಂಪೌಂಡ್, ಮಡಿಕೇರಿ

ಪುಟ : 75

ವಿನ್ಯಾಸ ಮತ್ತು ರೇಖಾ ಚಿತ್ರ : ಸತೀಶ್ ಬಿ.ಆರ್.

ಮುದ್ರಕಂಗ : ಶಕ್ತಿ ಪ್ರಿಂಟರ್ಸ್
ಕೈಗಾರಿಕಾ ಬಡಾವಣೆ
ಮಡಿಕೇರಿ - 571 201
☎: 228829, 229202

# ಕಾವ್ಯ ಲಹರಿ

ಕೊಡವ ಸಾಹಿತ್ಯ ಅಕಾಡೆಮಿ ಮತ್ತು ಮಡಿಕೇರಿ ಜನೋತ್ಸವ ದಸರಾ ಬಹುಭಾಷಾ ಕವಿಗೋಷ್ಠಿ ಸಮಿತಿ ವತಿಯಿಂದ ಪ್ರಕಟಿಸಲಾದ ಕವನ ಸಂಕಲನ

# ಮುಂಜೊಲ್

ಕೊಡಗ್‌ರ ಮಡಿಕೇರಿಲ್ ನಡಂದ್‌ಂಡುಳ್ಳ ದಸರಾ ಪೆರ್ತ್ ಕಾಲತ್ತ್‌ಂಜ ಜನೋತ್ಸವವಾಯಿತ್ ಜನಪ್ರಿಯ ಆಯಂಡುಳ್ಳದ್ ಖುಷಿ ಪಡುವ ಸಂಗತಿ. ಈ ಸಂದರ್ಭತ್ ದಸರಾ ಬಹುಭಾಷಾ ಕವಿಗೋಷ್ಠಿಯು ಅರ್ಥಪೂರ್ಣವಾಯಿತ್ ನಡಂದಂಡುಂಡ್. ಇಲ್ಲಿ ಕೊಡವ ಕೂಡ್‌ನನ್ನೆಕೆ ಕನ್ನಡ, ಅರೆಭಾಷೆ, ಬ್ಯಾರಿ, ತುಳು, ಮರಾಠಿ, ತೆಲ್‌ಗ್, ಕೊಂಕಣಿ, ಕುಂಬಾರ ಭಾಷೆ, ಇಂಗ್ಲಿಷ್ ಪಿಂಞ ಹಿಂದಿಲೂ ಕವಿಯ ಕವನ ಎಳ್ತಿತ್ ದಸರಾ ಸಂದರ್ಭತ್ ಓದಿತ್ ನಂಗಡ ಸಾಹಿತ್ಯಕ್ ಬಲ್ಯ ಕಾಣಿಕೆ ಕೊಡ್ತ್‌ಂಡುಂಡ್.

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಕವಿಗೋಷ್ಠಿಲ್ ನಡ್‌ಪ ಕವನತ್‌ನ್ನೆಲ್ಲ ಒರ್ ಜೊಪ್ಪೆಯಾಯಿತ್ ಪುಸ್ತಕ ರೂಪತ್ ಪ್ರಕಟ ಪಡ್‌ತುವಕ್ ಇಚ್ಛೆ ಪಟ್ಟಿತ್, ಇಂದಿಕ್ಕ ನಿಂಗಡ ಮಿಂಞತ್ "ಕಾವ್ಯಲಹರಿ" ಎಣ್ಣುವ ಕವನ ಜೊಪ್ಪೆನ ಪ್ರಕಟ ಪಡ್ತ್‌ಯಂಡ್‌ಡುಂಡ್. ದಸರಾ ಕವಿಗೋಷ್ಠಿ ಸಮಿತಿರ ಅಧ್ಯಕ್ಷ ಶ್ರೀಧರ ಹೂವಲ್ಲಿ ಈ ಎಲ್ಲಾ ಕವಿಯಡ ಕವನತ್‌ನ ಒರ್ ಜೊಪ್ಪೆಯಾಯಿತ್ ಅಕಾಡೆಮಿಕ್ ಎತ್ತ್‌ಚಿಟ್ಟಿತ್ ಸಹಕಾರ ತಂದಿತ್. ಇಯಂಗಕ್ ನಂಗಡ ಕೃತಜ್ಞತೆ.

ಕೊಡಗ್‌ರ ಕಾವ್ಯ ಪರಂಪರೆ ಬೊಳೆಯಡ್. ಈ ನಿಟ್ಟ್‌ಲ್ ಸಹಕರಿಚಿಟ್ಟ ಎಲ್ಲಾರ್‌ಕೂ ನಂಗಡ ವಂದನೆ.

**ಅಡ್ಡಂಡ ಸಿ. ಕಾರ್ಯಪ್ಪ**
ಅಧ್ಯಕ್ಷ
ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ

# ಕಾವ್ಯ ಲಹರಿ ಆರಂಭಕ್ಕೂ ಮುನ್ನ ...

ಐತಿಹಾಸಿಕ ರಾಜಪರಂಪರೆಯ ನಾಡಹಬ್ಬ ಮಡಿಕೇರಿ ದಸರಾ (ಜನೋತ್ಸವ) ಆಚರಣೆಯ ಈ ಶುಭ ವೇಳೆ ಕೊಡಗಿನ ಸಮಸ್ತ ಜನತೆಗೊಂದು ಸಂಭ್ರಮೋಲ್ಲಾಸ. ಇದೇ ಸಮಯದಲ್ಲಿ ನಡೆಯುವ ನವರಾತ್ರಿಯೂ ಸಹ ಜನತೆಗೆ ಹಬ್ಬದ ದೈವಿಕ ಸಡಗರವೂ ಹೌದು.

ಮಡಿಕೇರಿ ದಸರಾ ಜನೋತ್ಸವ ಮಾದರಿಯಲ್ಲಿ ಆಚರಿಸಲ್ಪಡುವುದರಿಂದ, ಮೈಸೂರು ದಸರಾವನ್ನು ಹೊರತುಪಡಿಸಿದರೆ ನಂತರದ ಸ್ಥಾನಕ್ಕೆ ಮಡಿಕೇರಿ ದಸರಾ ಸೇರಲ್ಪಡುತ್ತದೆ.

ಹಗಲು ವೇಳೆಯಲ್ಲಿ ಮೈಸೂರು ದಸರಾ ಉತ್ಸವ ನಡೆದರೆ, ಮಡಿಕೇರಿ ದಸರಾ ಉತ್ಸವ ಕಾರ್ಗತ್ತಲೆಯ ಅಂಧಕಾರವನ್ನು ಓಡಿಸುತ್ತಾ, ಇಡೀ ಮಡಿಕೇರಿ ನಗರವೇ ಝಗಝಗಿಸುವ ದೀಪಾಲಂಕಾರಗಳಿಂದ ಮೇಳೈಸುತ್ತ ಮರುದಿನ ಬೆಳಗಿನ ಜಾವದವರೆಗೆ ನಡೆಯುತ್ತದೆ.

ದಸರಾ ಸಂಭ್ರಮದ ಪ್ರಯುಕ್ತ ಹಲವಾರು ವರ್ಷಗಳಿಂದ ಮಡಿಕೇರಿಯಲ್ಲಿ "ದಸರಾ ಬಹುಭಾಷಾ ಕವಿಗೋಷ್ಠಿ"ಯನ್ನು ಜಿಲ್ಲಾ ಮಟ್ಟಕ್ಕೆ ಮಾತ್ರ ಸೀಮಿತಗೊಳಿಸಿದ್ದು, ಈ ಕವಿಗೋಷ್ಠಿಯಲ್ಲಿ ಕೊಡಗು ಜಿಲ್ಲೆಯ ಪ್ರತಿಭಾವಂತ, ಉದಯೋನ್ಮುಖ ಕವಿಗಳು ಕಾವ್ಯವಾಚನ ಮಾಡುತ್ತಾ ಬರುತ್ತಿದ್ದಾರೆ.

ಕನ್ನಡ, ಕೊಡವ, ಅರೆಭಾಷೆ, ತುಳು, ತೆಲುಗು, ಕೊಂಕಣಿ, ಬ್ಯಾರಿ, ಹಿಂದಿ, ಇಂಗ್ಲಿಷ್, ಮರಾಠಿ, ಕುಂಬಾರ ಭಾಷೆಯ ಕವನಗಳೂ ಕವಿಗೋಷ್ಠಿಯಲ್ಲಿ ವಾಚಿಸಲ್ಪಡುತ್ತಾ, ಬಹುಭಾಷಾ ಕವಿಗೋಷ್ಠಿಗೆ ಅರ್ಥಪೂರ್ಣವನ್ನು ನೀಡಿದಂತಾಗಿದೆ.

ಕವಿಗೋಷ್ಠಿಗೆ ಹಿಂದಿನ ವರ್ಷಗಳಲ್ಲಿ ಬರುತ್ತಿದ್ದಂತೆ ಈ ವರ್ಷವೂ ಸುಮಾರು 600ಕ್ಕೂ ಅಧಿಕ ಕವನಗಳು ಬಂದಿವೆ. ಪ್ರಸಕ್ತ ವರ್ಷ ನಾಡು-ನುಡಿ, ಪರಂಪರೆಗೆ ಹೆಚ್ಚಿನ ಒತ್ತು ನೀಡುವ ನಿಟ್ಟಿನಲ್ಲಿ ಕವನಗಳನ್ನು ಆಹ್ವಾನಿಸಲಾಗಿದೆ. ಕವನ ವಾಚನಕ್ಕೆ 25 ರಿಂದ 35 ಕವನಗಳಿಗೆ ಅವಕಾಶ ಮೀಸಲಿರಿಸಲು ಕವಿಗೋಷ್ಠಿ ಸಮಿತಿ ಒಕ್ಕೊರಲಿನಿಂದ ತೀರ್ಮಾನಿಸಲಾಯಿತ್ತಾದರೂ, ಕೊನೆಗೂ ಕಷ್ಟಸಾಧ್ಯದಿಂದ 53 ಕವನಗಳನ್ನು ಆಯ್ಕೆ ಮಾಡಿದ್ದಾರೆ. ಹೀಗೆ ಆಯ್ದ ಕವನಗಳು ಕವಿಗೋಷ್ಠಿಯಲ್ಲಿ ವಾಚಿಸಲು ಅವಕಾಶವಾಯಿತು.

ಪ್ರತಿವರ್ಷದಂತೆ ಕೊಡವ ಸಾಹಿತ್ಯ ಅಕಾಡೆಮಿಯು ಕವನ ಸಂಕಲನವನ್ನು ಈ ವರ್ಷವೂ ಮುದ್ರಿಸಲು ಆರ್ಥಿಕ ನೆರವನ್ನು ನೀಡಿದೆ.

ಇಲ್ಲಿ ಯಾರೂ ವೃತ್ತಿಪರ ಕವಿಗಳಲ್ಲ. ಸಂತೋಷಕ್ಕೆ ಇಂತಹ ಸಮಯ ಸಂದರ್ಭಗಳಲ್ಲಿ ಕವಿ-ಕವಿಯತ್ರಿಯರು ಒಂದು ಪ್ರಯತ್ನ ನಡೆಸಿರುವುದು ಆಯ್ಕೆ ಸಮಿತಿಯ ಆಯ್ಕೆ ಸಂದರ್ಭ ಗೋಚರಿಸಿದೆ. ಆದರೆ, ಹಲವರು ತಮ್ಮ ಪ್ರಯತ್ನದಲ್ಲಿ ಬಹುತೇಕ ಯಶಸ್ವಿಯಾಗಿದ್ದು, ತಮ್ಮ ಮುಂದಿನ ಪ್ರಯತ್ನಗಳಿಗೆ ಮತ್ತೊಂದು ಅವಕಾಶ ಪಡೆದಿದ್ದಾರೆ. ಆಯ್ಕೆಯಾದವು

ಶ್ರೇಷ್ಠ, ಆಯ್ಕೆಯಾಗದಿರುವುದು ಕನಿಷ್ಟ ಎಂಬ ಭಾವನೆಯಿಲ್ಲ. ಆಯ್ಕೆಯ ಇತಿಮಿತಿಯಲ್ಲಿ ಇವನ್ನು ಗಮನಿಸಲೇಬೇಕು.

"ಕಾವ್ಯ ಲಹರಿ" ಮೂಡಿಬರಲು ಕಾರಣಕರ್ತರಾದ ನಗರಸಭಾಧ್ಯಕ್ಷ, ದಸರಾ ಸಮಿತಿ ಅಧ್ಯಕ್ಷ ಶ್ರೀ ಹೆಚ್.ಎಂ. ನಂದಕುಮಾರ್, ಕಾರ್ಯಾಧ್ಯಕ್ಷ ಶ್ರೀ ರಾಬಿನ್ ದೇವಯ್ಯ, ದಸರಾ ಸಮಿತಿ ಪದಾಧಿಕಾರಿಗಳಿಗೆ, ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಅಡ್ಡಂಡ ಸಿ. ಕಾರ್ಯಪ್ಪ ಹಾಗೂ ಅಕಾಡೆಮಿ ಸದಸ್ಯರುಗಳಿಗೆ, ರಿಜಿಸ್ಟ್ರಾರ್‌ರಿಗೆ ಕವಿಗೋಷ್ಠಿ ಸಮಿತಿ ಪರವಾಗಿ ಕೃತಜ್ಞತೆಗಳು.

ಆಹ್ವಾನಿತ ಕವಿಗಳಾಗಿ ಆಗಮಿಸಿರುವ ಶ್ರೀಮತಿ ತೆನ್ನೀರ ರಾಧ ಪೊನ್ನಪ್ಪ, ಕುಡೆಕಲ್ ಸಂತೋಷ್ ಹಾಗೂ ಎ.ಹೆಚ್. ಸತೀಶ್‌ಕುಮಾರ್ ಅವರುಗಳಿಗೂ ಸಮಿತಿ ಅಭಾರಿಯಾಗಿದೆ.

ಈ ಕಾವ್ಯ ಸಂಕಲನಕ್ಕೆ 'ಕಾವ್ಯ ಲಹರಿ' ಹೆಸರು ಸೂಚಿಸಿದ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್‌ನ ಬಿ.ಸಿ. ದಿನೇಶ್, ಮುಖಪುಟ ವಿನ್ಯಾಸವನ್ನು ಚೆಂದಗಾಣಿಸಿದ ಖ್ಯಾತ ಕಲಾವಿದ ಬಿ.ಆರ್. ಸತೀಶ್, ಅಕ್ಷರ ವಿನ್ಯಾಸ ಮಾಡಿದ 'ಶಕ್ತಿ' ಮುದ್ರಣಾಲಯ, ಕವನಗಳನ್ನು ಆಯ್ಕೆ ಮಾಡಿ ಸಹಕರಿಸಿದ ಆಯ್ಕಾ ಸಮಿತಿಯವರ ಸಹಕಾರಕ್ಕೆ ಸಮಿತಿ ಧನ್ಯವಾದಗಳನ್ನು ಸಲ್ಲಿಸುತ್ತದೆ.

ಕವಿಗೋಷ್ಠಿಯಲ್ಲಿ ಪಾಲ್ಗೊಂಡು 'ಕಾವ್ಯ ಲಹರಿ' ಯಲ್ಲಿ ಅವಕಾಶ ಪಡೆದ ಕವಿಗಳಿಗೆ ಅಭಿನಂದನೆಗಳು.

**ಎಂ. ಶ್ರೀಧರ್ ಹೂವಲ್ಲಿ**
*ಅಧ್ಯಕ್ಷರು, ಕವಿಗೋಷ್ಠಿ ಸಮಿತಿ*
*ಮಡಿಕೇರಿ ಜನೋತ್ಸವ ದಸರಾ ಸಮಿತಿ* - **2012**

# ಪರಿವಿಡಿ

## ಆಹ್ವಾನಿತ ಕವನ


| | | |
|---|---|---|
| 1 | ಕಾವೇರಿ ನೀ ಪಾವನೆ | 1 |
| 2 | ಭಾವನೆರ ಮಣಿಮಾಲೆ | 2 |
| 3 | ಕಾವೇರಿ ನಾಡ್ | 3-4 |


## ಕನ್ನಡ ಕವನ


| | | |
|---|---|---|
| 4 | ಪ್ರಕೃತಿಯೊಳಗೊಂದು ಪಾರಿಜಾತ | 5 |
| 5 | ನೀ ಬರಬಾರದೇಕೆ ? | 6 |
| 6 | ಕನ್ನಡ ನಾಡು | 7 |
| 7 | ದಿಟದ ಬೆಳಕು | 8 |
| 8 | ಮಡಿಕೇರಿ | 9 |
| 9 | ಹಾಡು ಹಾಡಬೇಕು | 10 |
| 10 | ಬಾ ಎನ್ನ ಎದೆಯಾಳದಿಂದ | 11 |
| 11 | ಬರಹ ಸಂಸ್ಕೃತಿಯ ನುಡಿ | 12-13 |
| 12 | ಬದುಕಿನ ಪಥ | 14 |
| 13 | ಗೊಂದಲದಲ್ಲಿ ಸಂಸ್ಕೃತಿ | 15 |
| 14 | ಉತ್ಸವ ಮೂರ್ತಿ | 16 |
| 15 | ಕಾಡು ಕವಿತೆ | 17-18 |
| 16 | ತಂಗಾಳಿಯ ಅಳಲು | 19 |
| 17 | ಸಾವು | 20-21 |
| 18 | ನಾನು ಮತ್ತು ನನ್ನ ಆಗಸ | 22 |
| 19 | ಜ್ಞಾನಪೀಠ | 23 |
| 20 | ಸುಂದರ ಕೊಡಗು | 24 |
| 21 | ಆದರೆ ಇದೀಗ ? | 25 |
| 22 | ಚುಟುಕಗಳು | 26-27 |


## ಕೊಡವ ಕವನ


| | | |
|---|---|---|
| 23 | ನಾಡೋರ್ ಆಸೆ | 28-29 |
| 24 | ನಾಡ್‌ರ ಎಳ್ತ್ | 30 |
| 25 | ದಿನಚರಿ | 31 |
| 26 | ತಿಂಗ ಪರ್‌ಂದತ್ | 32-33 |
| 27 | ನಾಡ ನಾಡ್ | 34-35 |
| 28 | ಋಣ | 36 |
| 29 | ಒಂದಾಕನ ನಂದಾಕನ | 37 |


## ಅರೆಭಾಷೆ ಕವನ


| | | |
|---|---|---|
| 30 | ಅಂದ್-ಇಂದ್ | 38 |

# ಪರಿವಿಡಿ


31 ಚಾಮೆವ್ವ ನೆಂಪಾದವೆ ! 39-40
32 ಯೋಧಂಗೆ ಸಮರ್ಪಣೆ 41
33 ಕೊಡಗ್ 42
34 ಹೊತ್ತಾರನೆ ಮಡಿಕೇರಿ 43
35 ಮಡಿಕೇರಿ ದಸರಾ 44
36 ಸಮರ ವೀರ 45

ಕುಂಬಾರ ಭಾಷೆ ಕವನ

37 ಮಾನವ 46

ಬ್ಯಾರಿಭಾಷೆ ಕವನ

38 ಪೊಂಜಿರಿ 47
39 ಚಂದತ್ತೋ ಕೊಡಗ್ 48

ತುಳು ಭಾಷೆ ಕವನ

40 ಎಂಕುಲ್ನ ನೆಲ 49

ಮರಾಠಿ ಭಾಷೆ ಕವನ

41 ಅಮ್‌ಚಿ ಮಾಯ ಬಾಪ 50

ತೆಲುಗು ಭಾಷೆ ಕವನ

42 ಮಾ ಊರು ... ಮಾಮಾಟ ? 51-52

ಕೊಂಕಣಿ ಭಾಷೆ ಕವನ

43 ಚುಟುಕಗಳು 53

ಮಕ್ಕಳ ಕವನ

44 ಮಡಿಕೇರಿ ದಸರಾ 54
45 ಅನ್ನದಾತ 55
46 ದಸರಾ 56
47 ನನ್ನ ಸೇನಾನಿಗಳು 57

English Poems

48 Rain of Coorg 58
49 My Repentance 59
50 Rain 60
51 My Nation 61
52 Green Land 62

हिन्दि कवन

53 सुवह की रोशनी 63

ಆಹ್ವಾನಿತ ಕವನ

# ಕಾವೇರಿ ನೀ ಪಾವನೆ

ಕಾವೇರಿ ನೀ ಪಾವನೆ
ನಾಡಿನ ಜನತೆಗೆ ನೀರನುಣಿಸುವ
ನೀ ಭೂಮಾತೆಯ ಅನುಬಂಧವೇನೋ?
ನೀ ಜನಿಸಿರುವೆ ತಲಕಾವೇರಿಯಲಿ

ಪುಣ್ಯಕ್ಷೇತ್ರವಾಗಿರುವ ನೀನಲ್ಲಿ
ಭಕ್ತ ಜನತೆಯ ನರನಾಡಿಯಲಿ
ಹಾಡಿಹರಸುವರು ನಿನ್ನನ್ನೆಲ್ಲ
ತುಂಬಿಹುದಲ್ಲಿ ಆನಂದವೆಲ್ಲ

ನಿನ್ನಿಂದಲೇ ರೂಪುಗೊಂಡಿರುವುದು
ಮೈಸೂರಿನ ಕನ್ನಂಬಾಡಿ
ವಿಶ್ವೇಶ್ವರಯ್ಯ ಒಡನಾಡಿ
ಮೈಸೂರು ಜನತೆಯ ಜೀವನಾಡಿ

ಬೃಂದಾವನದ ವೈಭವ ಸಿರಿಯಲಿ
ಕಂಗೊಳಿಸುವ ನೀ ತಪೋವನಿ
ಪ್ರವಾಸಿಗರ ಹೃದಯ ಮಂದಿರದಲಿ
ನೆಲೆ ನಿಂತಿರುವ ಸುಹಾಸಿನಿ

ಜನಮನದಲಿ ನಿನ್ನಾರಾಧನೆ
ಅಂತರಾಳದ ನಿವೇದನೆ
ವಿವಾದದಲಿ ಎಂದು ಕೊನೆ?
ಸಹೃದಯದಲಿ ಕಾವೇರಿ ನೀ ಪಾವನೆ.

- ಎ.ಹೆಚ್. ಸತೀಶ್‌ಕುಮಾರ್, ಚೇರಂಬಾಣೆ

ಆಹ್ವಾನಿತ ಕವನ

# ಭಾವನೆರ ಮಣಿಮಾಲೆ



ಭಾವನೆರ ಮಣಿಮಾಲೆ
ಅಂತರಾಳತ್ ತಿರಿಯಂಡ್
ಏಳ್ ಏಳ್ಂದ್ ಕೂತ್‌ಡುವ
ಸಾಹಿತ್ಯತ್‌ರ ಸಾಲ್‌ಲ್ ಪೊರ
ಬಪ್ಪಕ್ ಪೇಚಾಡುವ

ದಿನ ದಿನ ಲೋಕತ್ ನಡ್‌ಪ
ಪಾಪ ಕೂಪತ್‌ನ ತಡ್‌ಪಕ್
ಬ್ರಷ್ಟ ನ್ಯಾಯತ್‌ನ ನೇತಿ
ಪುಡಿಪಕ್ ಒದ್ದಾಡುವ

ದೇಶತ್ ಬಡವಂಡ ಪೊಟ್ಟೆ ಪಾಡ್
ಕಣ್ಣೀರ್‌ರ ಗೋಳ್‌ರ ಬಾಳ್
ಅಧಿಕಾರಕ್ ಕಳ್ಳ ಪಣತ್‌ರ
ದಾವುರ ಕೂಡ್
ಜೋಬುರ ಬರ್ತಿಕ್ ಪೇಚಾಡ್

ನಡ್‌ಪ ಲೋಕತ್ತಿಂದ್
ಆಯಿರಾರ್ ಹಗರಣ ಆಚೇಂಗಿ
ಮುಚ್ಚಿರುವ ಇದ್‌ನೆಲ್ಲ ಕಳ್ಳಪಣ
ಕಡೆಲೊಮ್ಮತೆ ಪೊರ ಬುದ್ದಿತೆ ಬೂವ
ಅನ್ನತವಂಡ ನೇರಾನ ಬಣ

ದಾರೋ ನೈಚ ಫಲತ್‌ರ ಋಣ
ಬೆವರ್ ಬೂಕಿತ್ ನೀರಾಕ್‌ನ
ಚೋರೆರ ಕಣ ಎತ್ತುಲೆ
ತಿಂದಂವಂಗ್ ಈ ಪಣ
ಅರಿವಾಪ ಅವಂಗ್ ರಟ್ಟಾಪ ಆ ಆ ಕ್ಷಣ.

- ತೆನ್ನೀರ ರಾಧ ಪೊನ್ನಪ್ಪ, ಮಡಿಕೇರಿ

ಆಹ್ವಾನಿತ ಕವನ

# ಕಾವೇರಿ ನಾಡ್



ಕನ್ನಡ ನಾಡ್‌ನ ಜೀವನಾಡಿ
ನೆರೆ ರಾಜ್ಯಗಳ ಅನ್ನದಾತೆ
ರೈತರ ಬಾಳ್‌ನ ಕಾಮಧೇನು
ಹುಟ್ಟಿದ ಮಣಲಣೇ ಕಾವೇರಿ ನಾಡ್
ನಮ್ಮೆಲ್ಲರ ಸೌಭಾಗ್ಯದ ಬೀಡ್...

ಪುಣ್ಯ ಕ್ಷೇತ್ರ ಈಗ ಪ್ರವಾಸಿ ಭೂಪಟಲಿ
ಬಂದವೆ ಗೂಡೆಗ ಸನ ಚಡ್ಡಿ-ಬನಿಯನ್‌ಲಿ
ಹಣ್ಣ್-ಕಾಯಿ ಬ್ಯಾಗ್‌ಲಿ ಕಾಂಬಲೆ
ಚಿಪ್ಸ್, ಸಾಫ್ಟ್ ಡ್ರಿಂಕ್ಸ್, ಕ್ಯಾಮರಾ...
ಕಂಡದೆಲ್ಲ ಸೀನ್, ಮಾಡ್ವೆ ಅಲ್ಲಿ ಪೊಲ್ಯೂಶನ್...

ವೀರ-ಶೂರರ ನಾಡ್...
ಕಟ್ಟಿದ ಮನೆಲಿ ಹುಟ್ಟುದ ಕೂಸು
ಮೆಟ್ಟಿ ತೋರ್ಸಿದೆ ಮಣ್ಣ್‌ನ ಬಿರ್‌ಸ್
ಜಗತ್ತೇ ಹೇಳ್ದೆ ಗಂಡ್ ಮೆಟ್ಟಿದ ನಾಡ್
ಸಾಕ್ಷಿಯಾಗೊಳೊ ಅಪ್ಪಯ್ಯಗೌಡ, ಕಾರ್ಯಪ್ಪ, ತಿಮ್ಮಯ್ಯ
ಹೇಳ್ವೆ ಈಗ ಓಡ್ಸಬಡಿ ನಮ್ಮನ ದಮ್ಮಯ್ಯ...

ನೆಂಟರ್ ಬಂದರೆ ಅದೇ ಒಂದು ಹಬ್ಬ
ಮೊಟ್ಟೆ ಹೆಂಟೆನ ಕೊಯ್ದ್
ರೊಟ್ಟಿ, ಪುಂಡಿ, ಕುಪ್ಪಿಲಿ ನಾಡ್ ಸಾರಾಯಿ
ಗದ್ದಳ ಉಂಡ್ ಕಷ್ಟ-ಸುಖದ ಮಾತ್,
ನಡುಬಾಡೆಲಿ ಮಂದ್ರಿ ಹಾಸಿರೆ ಸುಖನಿದ್ದೆ
ಇದ್ ನಮ್ಮ ಸಂಸ್ಕೃತಿ...

ಬಂದವೆ ಇಂದ್ ನೆಂಟ್ರ್‌ಗ
ಮೊಬೈಲ್, ಇಂಟರ್‌ನೆಟ್, ಆನ್ ಲೈನ್‌ಲಿ ಬುಕ್ಕಿಂಗ್
ಬಂದವ್‌ಕೆ ತಲೆಗಿಷ್ಟ್ ರೇಟ್ಸ್
ಎರಡ್ಡೊತ್ತ್ ಕೂಳಿಗೆ ಬಿಲ್...
ಮಲ್ಗಿಕೆ ಕರ್ಲಾನ್ ಬೆಡ್, ಫ್ಯಾನ್
ಮನೆ ಯಜಮಾನಂಗೆ ಸ್ಟೋರ್ ರೂಂ ಕೊಟ್ಟಿಗೆ...
ಇದೇನಾ ನಮ್ಮ ಸಂಸ್ಕೃತಿ?

ಮನ ಬಂದಂಗೆ ನುಗ್ತಾ ಒಳೊ ಪರದೇಶಿಗ
ಶುಂಠಿ, ಯಾಲಕ್ಕಿ, ಮೆಣಸ್ ವ್ಯಾಪಾರದ ನೆಪ
ಗೊತ್ತಿಲ್ದಂಗೆ ದೂರಲಿ ಮಾಡ್ವೆ ಸದ್ದ್
ಮುಂಬೈಲಿ ಹೊಟ್ಟ್ವ ಬಾಂಬ್‌ಗೆ ಇಲ್ಲಿಂದಲೇ ಬತ್ತಿ...
ಉಗ್ರಗಾಮಿಗಳಿಗೆ ಸನ ಈ ಮಣ್ಣ್‌ನ ಮ್ಯಾಲೆ ಕಣ್ಣ್....

ಗುಡ್ಡ-ಕಾಡ್‌ಂದ ಹರ್ದ್ ಬಂದದೆ ಕೊಲ್ಲಿ
ತಡ್ದ್ ಅಡ್ಡಕಟ್ಟಿಕೆ ಪ್ಲಾನ್ ಅಲ್ಲಲ್ಲಿ
ನಮ್ಗೆ ಕರೆಂಟ್ ಕೊಟ್ಟವೆಗಡ...
ತೋಟ, ಗದ್ದೆ, ಮನೆ ಮುಳುಂಗಿದೆ
ಊರಲಿದ್ದವೆಲ್ಲ ನಾಡ್ ಬುಟ್ಟ ಮ್ಯಾಲೆ
ಕರೆಂಟಾದರೋ ಯಾರ ಗೋರಿಗೆ?

ಹಸ್‌ರ್ ಗುಡ್ಡ-ಕಾಡ್ ಇತ್ತ್ ಅಂದ್
ಕಡ್ದ್ ಗುಡ್ಡೆ ಹಾಕ್ತಾ ಉಟ್ಟು ಜೆಸಿಬಿ
ಆಕಾಸನ ಮುಟ್ಟುವಂಗೆ ಕಾಂಕ್ರಿಟ್ ಗೋರಿಗ
ಕೇಳ್ರೆ ಹೇಳ್ವೆ ಅದ್ ರೆಸಾರ್ಟ್ ಸಂಸ್ಕೃತಿ
ಮಣ್ಣಾಗಿ ಹೋಗ್ತಾ ಉಟ್ಟು ಕೊಡಗ್‌ನ ಪ್ರಕೃತಿ...

- ಕುಡೆಕಲ್ ಸಂತೋಷ್, ಮಕ್ಕಂದೂರು

ಕನ್ನಡ ಕವನ

# ಪ್ರಕೃತಿಯೊಳಗೊಂದು ಪಾರಿಜಾತ



ಸಕಲ ಜೀವ ಸಂಕುಲವೇ
ನಿನ್ನೊಂದಿಗೆ ಸುರಕ್ಷತೆಯ ಮೆಲುಕು
ಇಟ್ಟ ಹೆಜ್ಜೆಯ ಸಂಕೇತದ ಬದುಕು

ನಿಮ್ಮಿಂದಲೇ ಈ ಭಾನು
ನಿಮ್ಮಿಂದಲೇ ಈ ಜಗವು
ಸದಾ ಕಾಯುವ ಔದಾರ್ಯ ನಿಮ್ಮದು

ತಾಯೊಡಲಿಗೆ ತಂಪೆರೆಯುವ ಬಾಂಧವ್ಯದಿ
ಪಾಪಗಳ ಕೂಪದಿ ತೊಳೆದು ಹೋಗುವಿರಿ
ನಿಮಗಾಗಿ ಕಾದಿಹ ಧರೆಯೊಳಗೆ

ಜಡತ್ವವ ತೊರೆದು ದೃಢ ಸಂಕಲ್ಪದಿ
ವರ್ಷವಿಡಿ ಶ್ರಮಿಸಿ.... ಸಂಪತ್ತಾಗಿ
ಗುರಿಯಿರದೆ ವ್ಯರ್ಥವಾಗುವಿರಿ

ಮಂದಗತಿಯು ಸಾಗುತ್ತಿರುವ ಪಯಣ
ಸೋಲು, ಗೆಲುವುಗಳಿಗೆ ಸಾಕ್ಷಿಯಾಗಿ
ಬದುಕು ಸಾರ್ಥಕತೆಯ ಜಾಗೃತಿಯು

ನೇಸರನ ಬೆಳಕಿನಲ್ಲಿ ನಗುತ್ತಿರುವ ಹೂಗಳು
ಬರಿದೇ ಜಗವ ನೋಡುತ್ತಿರಲು
ಹೆಣೆದ ಕನಸು ಬಾಡುತ್ತಿರಲು

ಭವಿಷ್ಯವಿಲ್ಲದ ಜೀವ ಫಲವು
ನಶಿಸಿ ನಲುಗಿ ಹೋಗುತ್ತಿರಲು
ಅಸ್ಪಷ್ಟವಾಗಿ, ಅಭದ್ರಗೊಂಡ ಜೀವ ಸಂಕುಲವೇ

ಪರಿಳಿತಗಳ ಹಾದಿಯಲಿ ಜಾರಿ ಹೋಗದೆ
ಜೀವಿಗಳು ಭುವಿಯ ಸ್ವತ್ತಾಗಿ
ಪ್ರಕೃತಿಯೇ ನಿಜ.... ಪಾರಿಜಾತವಾಗಲಿ.

- ಹೇಮಲತಾ ಪೂರ್ಣಪ್ರಕಾಶ್, ಮಡಿಕೇರಿ

# ನೀ ಬರಬಾರದೇಕೆ ?



ನೆನಪೆಂಬ ಸಾಗರದಿ ನೀ
ಸದಾ ತಂಪು ನೀಡುವ ಅಲೆಯಂತೆ
ತಂಪೆರೆವ ತಂಗಾಳಿಯಂತೆ
ಹಕ್ಕಿಗಳ ಸುಮಧುರ ಸಂಗೀತದಂತೆ
ಮುಳುಗುತ್ತಿರುವ ಸೂರ್ಯನ ತಿಳಿಬೆಳಕಿನಂತೆ
ನೀ ತೇಲಿ ಬರಬಾರದೇಕೆ....

ಎಲೆ ಉದುರಿ ಬೋಳಾದ ಮರದಲಿ
ಚಿಗುರೊಂದು ಕಾಣಿಸಿದಂತೆ
ದಟ್ಟ ಕಾನನದ ನಡುವೆ ಕತ್ತಲು ಆವರಿಸುತ್ತಿರುವಂತೆ
ಕಪ್ಪಾದ ಆಗಸದಲ್ಲಿ ಕಂಡ ಅಸಂಖ್ಯಾ
ತಾರೆಗಳ ನಡುವೆ ಮಿಂಚುವ ನಕ್ಷತ್ರದಂತೆ
ನೀ ಎನ್ನ ಬಾಳಲಿ ಬರಬಾರದೇಕೆ...

ಬರಡಾದ ಭುವಿಗೆ ಹನಿ ನೀರಂತೆ
ನೊಂದ ಮನಕೆ ಭರವಸೆಯ ಸಾಂತ್ವನದಂತೆ
ಉಸಿರ ತೊರೆದವಗೆ ಸಂಜೀವಿನಿಯಂತೆ
ನಿನಗಾಗಿ ಕನವರಿಸುವ ಈ ಜೀವಕೆ
ಪ್ರೀತಿಯ ಸವಿ ಉಣಿಸಲು
ನೀ ಮತ್ತೊಮ್ಮೆ ಬರಬಾರದೇಕೆ...?

- ಅಕ್ಷತಾ ಶೆಟ್ಟಿ, ಮಡಿಕೇರಿ

# ಕನ್ನಡ ನಾಡು



ನಾಡು, ನಾಡು, ನಲ್ಮೆಯ ಕನ್ನಡ ನಾಡು
ಶ್ರೀಮಂತ ಪರಂಪರೆಯ ಸುಂದರ ಬೀಡು
ಇಲ್ಲಿರುವುದು ಸುಂದರ ಹಚ್ಚ ಹಸುರಿನ ಕಾಡು

ಕನ್ನಡವೆಂದರೆ, ಬಲು ತಂಪು
ಕೇಳಲು ಕಿವಿಗದು ಇಂಪು
ಹರಡಿದೆ ಎಲ್ಲೆಲ್ಲೂ ತನ್ನದೇ ಕಂಪು

ಇದು ಹಲವು ಕವಿಗಳ ಗೂಡು
ಎಲ್ಲಾ ಮತಗಳ ಭಾವೈಕ್ಯತೆಯ ಬೀಡು
ಆಹಾ! ಇಲ್ಲಿನ ಸೊಬಗನು ನೋಡು

ರಮ್ಯ ಶೋಭೆಯ ಸುಂದರ ತಾಣ
ಕನ್ನಡವೆ ನಮ್ಮಯ ಪ್ರಾಣ
ಹೇಗೆ ತೀರಿಸಲಿ ನಿನ್ನಯ ಋಣ

- ಪಾಣತ್ತಲೆ ಕಲ್ಪನಾ ರಾಘವಯ್ಯ. ಭಾಗಮಂಡಲ

# ದಿಟದ ಬೆಳಕು



ಬೀದಿಯಲಿ ಹಸಿದ ಬಾಲ್ಯ
ಬೆಳೆಯುತ್ತಿರುವ ಮಗುವಿಗೆ
ಅನ್ನ ನೀಡು ಹಗಲೇ...
ಜೋಗುಳದ ಧನಿಯಿರದ ರಾತ್ರಿಗಳಿಗೆ
ಚುಕ್ಕಿ-ಚಂದ್ರಮರ ಕಾವಲು ಹಾಕಿಸು

ಬಟ್ಟ ಬಯಲಲಿ ಖಾಲಿ ತಟ್ಟೆಯ ಹಿಡಿದು
ದಿಕ್ಕೆಟ್ಟು ನಿಂತ ಅಸಹಾಯಕತೆಗೆ
ಒಂದಿಷ್ಟು ನೆರಳು ನೀಡು ಇರುಳೇ,
ದಾಹ ಎಂದು ಬಾಯಾರಿ ಬಂದ ಗಂಟಲೊಳಗೆ
ಒಂದೆರಡು ಮಳೆಯ ಹನಿಯ ಇಳಿಸು

ಕಾಮನ ಬಿಲ್ಲಿನ ಬಣ್ಣಗಳನ್ನೆಲ್ಲಾ ಒಂದಿಷ್ಟು
ಸಾಲ ಕೊಟ್ಟುಬಿಡು
ಅರೆಬೆಂದ ಕನಸುಗಳೆಲ್ಲಾ ಆಡಸಿಗಬಹುದು
ಈ ಖಾಲಿ ಹಾಳೆಗಳಿಗೆ ಬಣ್ಣ ತುಂಬಿತು

ಹರಿದ ಅಂಗಿ ಹೊಲಿಯಲು ಸೂಜಿದಾರ
ಹುಡುಕುತ್ತಿರುವ ಕೈಗಳಿಗೆ ಕಸುವು ನೀಡು
ಎಣ್ಣೆ ಇಲ್ಲದೆ ಹಣತೆ ಹಚ್ಚುತ್ತೇನೆನ್ನುವರ
ಹುಚ್ಚಿಗೆ "ದಿಟದ ಬೆಳಕು" ತೋರಿಸು.

ನೆಲದ ಮಕ್ಕಳು ನಾವೆಲ್ಲ ಹುಚ್ಚೆದ್ದು ಹುಟ್ಟುವಾಗ
ಹದ್ದುಗಳಿಗಾದರೂ ಒಂದಿಷ್ಟು ಸಂಗೀತ ಕಲಿಸು
ಹಾಡ ಬಾರದ ಹಾಡ ಕಾಲ ಕಲಿಸುವಾಗ
ಕೊಚ್ಚಿ ಹೋಗುವ ಜೀವಕ್ಕಿಷ್ಟು ಕೊಳ್ಳಿ ಇಡಿಸು!!

- ಮಿಲನ ಕೆ. ಭರತ್, ಭಾಗಮಂಡಲ

# ಮಡಿಕೇರಿ



ಹಸಿರು ವನದೇವತೆಯ ತೌರೂರಿದು
ಹಾಲೇರಿ ಮುದ್ದುರಾಜನ ಕೋಟೆ ಎದ್ದು ಕಾಣುತಿಹುದು
ರಾಜಾಸೀಟು ಪಚ್ಚೆ ರೇಷ್ಮೆಯ ಹಾಸಿ ಕದಿವುದು
"ದಕ್ಷಿಣ ಕಾಶ್ಮೀರ" ಇದಾಗಿಹುದು ನೋಡ ಬನ್ನಿ

ಕಾಲಿಟ್ಟೊಡನೆ ವೀರ ಯೋಧರ ಪ್ರತಿಮೆ
ಮನದಲ್ಲಾಗುವುದು ನೈಜ ರೂಪದ ಭ್ರಮೆ
ದೇಗುಲ, ಗದ್ದುಗೆ, ಚರ್ಚುಗಳು
ವಿವಿಧ ಕೋಮಿನವರಿಹರೆಂಬುದಕೆ ಆಧಾರಗಳು

ನಾಡ ಸಿರಿದೇವಿಯಾಗಿ ಕಾವೇರಿ
ಹರಿದಿಹಳು ನಾಡುದ್ದಕೆ ಬಾಗಿ ಬಳುಕಿ
ಪಚ್ಚೆಯಾಗಿ ನಿಂತಿವೆ ಮರ ಬಳ್ಳಿಗಳು
ನಾಡ ತಾಯ್ಗೆ ಚಾಮರ ಬೀಸಲೆಂದು

ಕೊಡಗಿನ ಇತಿಹಾಸಕೆ ಮೂಕ ಸಾಕ್ಷಿ ಅರಮನೆ
ನೈಜ ಭ್ರಮೆಯ ಭವದಲ್ಲಿ ಈಶಾನ್ಯಕ್ಕಿದೆ ಎರಡಾನೆ
ಎಲ್ಲಾ ದೇವಾಲಯಕ್ಕೆ ಹಿರಿದಾಗಿ ಓಂಕಾರೇಶ್ವರ
ಕೋಟೆಯ ಕಾಯಲೆಂದೇ ಕುಳಿತಹನು ವಿಘ್ನೇಶ್ವರ

- ಟಿ.ಪಿ. ಮಂಜುನಾಥ್, ಕುಶಾಲನಗರ

# ಹಾಡು ಹಾಡಬೇಕು



ನಾವೊಂದು ಹಾಡು ಹಾಡಬೇಕು
ಸರಿಗಮಪದನಿಸವಿಲ್ಲದಿದ್ದರೂ
ಸಮಾನತೆಯ ಸುಗಂಧವನ್ನು
ಜಗತ್ತಿಗೆ ಹರಡುವ ಹಾಡು ಹಾಡಬೇಕು
ಮೇಲುಕೀಳು, ಜಾತಿ-ಮತದ ಭೇದ ತೊರೆದು
ಮಾನವೀಯತೆಯ ಹರಡುವ
ಹಾಡು ಹಾಡಬೇಕು
ಗಂಡು ಹೆಣ್ಣೆಂಬ ಬೇಧ ಅಳಿಸಿ ವರ್ಗ ತಾರತಮ್ಯ ತೊಲಗಿಸಿ
ಸಮತ ಸಮಾಜಕ್ಕಾಗಿ ಹಾಡಬೇಕು
ಬಿಳಿಯ-ಕರಿಯ ಎಂಬ ವರ್ಣಬೇಧ ಅಳಿದು
ಒಟ್ಟಾಗಿ ಎಲ್ಲರೂ ಹಾಡಬೇಕು
ಸರ್ವರ ನೋವು ಉಪಶಮನಗೊಳಿಸುವ
ಹಾಡು ಹಾಡಬೇಕು
ಗಡಿ, ನದಿ ತಂಟೆ ತೊಲಗಿಸಿ
ಜನರ ನಡುವಿನ ಗೋಡೆ ಒಡೆದು
ಸೇತುವೆಯಾಗುವ ಹಾಡು ಹಾಡಬೇಕು
ಸಪ್ತ ಸ್ವರಗಳು ಇಲ್ಲದಿದ್ದರೂ
ಸರ್ವರ ಹೃದಯ ಬೆಸೆಯುವ
ಹಾಡು ಹಾಡಬೇಕು
ಧರ್ಮಗಳು ಉಳಿದು ಅಧರ್ಮ ಅಳಿದು
ರಾಗತಾಳ ಪಲ್ಲವಿಗಳಿಲ್ಲದಿದ್ದರೂ ಹೊಸರಾಗ ಹೊಮ್ಮಿಸಿ
ಏಕಕಂಠದಲ್ಲಿ ಉದಯಗಾನ ಹಾಡಬೇಕು
ಸರ್ವರಿಗೂ ಒಳಿತಾಗುವ ನವಗಾನ ಹಾಡಬೇಕು
ನಾವೊಂದು ಹಾಡು ಹಾಡಬೇಕು.

- ಇ. ಸುಲೆಮಾನ್, ಸೋಮವಾರಪೇಟೆ

# ಬಾ ಎನ್ನ ಎದೆಯಾಳದಿಂದ



ಮಾತೇ...s...s....s... ನೀ ಪದವಾಗಿ ಬಾ .....
ಎನ್ನಲಿ ಸುಲಲಿತವಾಗಿ ನೀ ..........
ಲೇಖನಿಯೊಳು ಅರ್ಥವಾಗಿ ನೀ.....
ದನಿಯ ಪರಿಳಿತವಾಗಿ ಬಾ.....
ಬಾ ಎನ್ನ ಎದೆಯಾಳದಿಂದ.....

ಕತ್ತಲ ಕನವರಿಕೆಯಲ್ಲಿರುವಾಗ ನಾ...
ಹೊಂಗನಸನೀಯುವ ಬೆಳಕಾಗಿ ಬಾ.....
ಮೌನದಲಿ ಮಾತ ಮರೆತಾಗ ನಾ....
ಏಕಾಂತದೊಳೆನ್ನ ವಿಚಲಿತಗೊಳಿಸ ಬಾ....
ಬಾ ಎನ್ನ ಎದೆಯಾಳದಿಂದ

ದನಿಯೆತ್ತಿ ಹಾಡಲು ತವಕಿಸುವಾಗ ನಾ....
ಕರತಾಡನಗೈವ ಕರವಾಗಿ ಬಾ...
ನೆರಳಾಗಿ ನನ್ನ ಹಿಂಬಾಲಿಸಿ ನೀ....
ಅಳುವಾಗ ಎದೆಗವುಚಿ ಸಂತೈಸ ಬಾ
ಬಾ ಎನ್ನ ಎದೆಯಾಳದಿಂದ....

ಧನ್ಯತೆಯ ಭಾವ ಎನ್ನಲಿ ಅರಳಿಸ ಬಾ...
ಜೊತೆಗಾರನಂತೆನ್ನ ಬದುಕಾಗಿ ನೀ....
ಬಾ ಎನ್ನ ಎದೆಯಾಳದಿಂದ .....
ನನ್ನೀ ಮನವು ಮುದುಡುವ ಮುನ್ನ...
ಬಿಸಿ ರುಧಿರ ತಣಿಯುವ ಮುನ್ನ....
ಬಾ ಎನ್ನ ಮನದಾಳದಿಂದ.

- ಸೌಮ್ಯಶೆಟ್ಟಿ, ಮಡಿಕೇರಿ

# ಬರಹ ಸಂಸ್ಕೃತಿಯ ಕನ್ನಡಿ



ಬೊಜ್ಜು ಕರಗಿಸಲು
ನಡಿಗೆ ಉತ್ತಮ ವ್ಯಾಯಾಮ;
ಅದು ನೀಡುವುದು
ಬಾಳಿಗೆ ಹೊಸ ಆಯಾಮ!
ರಸ್ತೆಯಲಿ ಹಾಗೇ
ನಾಲ್ಕು ಹೆಜ್ಜೆ ಹಾಕಿದರೆ,
ತೆರೆದುಕೊಳ್ಳುವುದು
ನಮ್ಮ ಸಂಸ್ಕೃತಿಯ ದೀವಿಗೆ!

ಅರೇರೇ, ಕಾರೊಂದರ ಹಿಂಬದಿಯ
ಬರಹ ಗಮನಿಸಿದಿರಾ?!
'ಈಗಷ್ಟೆ ವಿವಾಹವಾಗಿರುವೆ,
ಸುಖಾಸುಮ್ಮನೆ ತೊಂದರೆಯೊಡ್ಡದಿರಿ!
ಹುಚ್ಚು ಹಿಡಿದಿದೆ ಈಗಾಗಲೇ!!"

ಸನಿಹದಲೆ ನಿಂತಿದೆ ಬೈಕು
'ನಾನಿನ್ನೂ ಒಬ್ಬಂಟಿಯಾದರೂ
ಬತ್ತಿಲ್ಲ ಜೀವನೋತ್ಸಾಹ
ಎಂಬ ಬರಹದ ಸೊಕ್ಕು!!

'ಲೋ ಮಚ್ಚ,
ಮಚ್ಚಲ್ಲಿ ಬಿದ್ರೆ ಒಂದೇ ಏಟು!
ಲವ್‌ನಲಿ ಬಿದ್ರೆ
ಬದ್ಕೋದೇ ಡೌಟು!!'
ಈ ಬರಹದೊಂದಿಗೆ ಸಾಗಿದೆ
ಆಟೋವೊಂದರ ಗತ್ತಿನ ಸವಾರಿ!

'ಪ್ರೀತಿ ಯಾರಿಗೂ ಮೋಸ ಮಾಡಲ್ಲ!
ಪ್ರೀತಿಸಿದವರ್‍ಯಾಕೆ ಪ್ರೀತಿಗೆ
ಮೋಸ ಮಾಡ್ತಾರೆ?!'
ಧುತ್ತನೆ ಸಾಗಿದ ಮತ್ತೊಂದು
ತ್ರಿಚಕ್ರ ಗಾಡಿಯ ಹಿಂಬದಿಯಲಿ
ಗೋಚರಿಸಿದ ಪ್ರಶ್ನೆ!!

ಇದೆಲ್ಲವ ನೋಡಿ ಎದೆಗುಂದಿದಿರಾ?!
ಧೃತಿಗೆಡದಿರಿ, ಇಲ್ಲಿದೆ ಸಂಸ್ಕೃತಿಯ ದೀವಿಗೆ!
ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲಿ
ರಾರಾಜಿಸುತ್ತಿರುವ ಬರಹ!!

'ಇರುವುದೆಲ್ಲವ ನೆನೆದು
ಬಾರೆನೆಂಬುದ ಬಿಡು
ಹರುಷಕ್ಕಿದೆ ದಾರಿ'
ಡಿವಿಜಿಯ ಈ ಬರಹ
ತುಂಬುವುದು ಬಾಳಿನಲಿ ಎಂದಿಗೂ ಭತ್ತದ ಸ್ಫೂರ್ತಿ

- ದಿನೇಶ್ ಕಾರ್ಯಪ್ಪ, ಮಡಿಕೇರಿ

# ಬದುಕಿನ ಪಥ



ಓ ಮನುಜ, ವಿಸ್ತರಿಸು
ನಿನ್ನೆದೆಯ ಮಿತಿಯನು
ನಾನೆಂಬ ಒಣಮುಳ್ಳು ಮಣ್ಣಾಗಿ
ಹೊಸ ಬೀಜ ಮಳೆಯಲಿ
ದೊರೆಯಲಿ ಪರಿಮಳ ಪ್ರತಿ ಜೀವಕೆ
ಸಮಾನತೆಯೇ ಹೂವ ಮಂತ್ರ

ಎಲ್ಲ ನದಿಗಳಿಗೆ ಸಾಗರ
ಜಾತಿಗಳಿಗೆಲ್ಲ ಮಾನವತೆ
ಸುಮ್ಮನೆ ಬಡಿದಾಟವೇಕೆ
ನಿರ್ಮಿಸು ಮನದಲಿ ಹೆದ್ದಾರಿ
ಕೂಡಿ ಸಾಗುವುದು ಬಲು ಚೆಂದ
ಜಗಕೆ ನೆಮ್ಮದಿ ಅದರಿಂದ

ನಾನೆಂದು ಸಿಡಿಯುವುದು ಬಿಡು
ನಾವೆಂದು ನಮಸ್ಕರಿಸಿ, ಕೈಕುಲುಕಿ
ತೋಳಲಿ ಬಂಧಿಸುವುದು ಆನಂದ
ಶುರುವಾಗಲಿ ಈಗಲೇ ಮುನ್ನುಡಿ
ಜಗದೊಳಗೆ ಒಂದಾಗಿ ನಕ್ಕು
ನೀಡು ಜಗಕೆ ಚೇತನವ

ಸುಡುವ ಕೊಡುವ ಪದಗಳ ಹಂಗೇಕೆ
ನಗುವೆಂಬ ಮೌನವೆ ಸಾಕು
ಹರಡಲು ಜಗಕೆ ಶಾಂತಿ
ಸುಮ್ಮನೆ ನಕ್ಕು ಬಿಡು
ಇಲ್ಲದಿರೆ ತಲೆತಗ್ಗಿಸಿ ನಡೆ
ದುರುಗುಟ್ಟಿ ನೋಡಬೇಡ ಜಗವ.

- ತೊರೆನೂರು ಸುಕುಮಾರ್, ಸೋಮವಾರಪೇಟೆ

# ಗೊಂದಲದಲ್ಲಿ ಸಂಸ್ಕೃತಿ



ನಾಚಿ ನೀರಾಗಿ
ಅಪಮಾನ ಕಾಡಿದಂತಾಗಿ
ನೊಂದು ಬಸವಳಿದಿದ್ದಾಳೆ
ನಮ್ಮ 'ಸಂಸ್ಕೃತಿ' ಅಮ್ಮ

ಅರೆನಗ್ನಳಾಗಿ ದಿಟ್ಟೆಯಂತೆ ನಿಂತ
ಮೋಹನಾಂಗಿಯರ ವರ್ಣಮಯ ಚಿತ್ರಗಳ
ನಿರ್ಲಜ್ಜತೆಯ ನೋಡಿ
ಕುಗ್ಗಿ-ಖತಿಗೊಂಡು, ನಾಚಿ ನೀರಾಗಿ
ನೆಲ ಕೆರೆಯುತ್ತಿದದಾಳೆ 'ಸಂಸ್ಕೃತಿ' ಅಮ್ಮ

ಪಾಶ್ಚಾತ್ಯ ನೃತ್ಯಗಳ ಪಾಪ್‌ಗೀತೆಗಳ
ಪಬ್ ಅಬ್ಬರದ ನಡುವೆ ನಲುಗಿ
ಬಸವಳಿದಿದ್ದಾಳೆ 'ಸಂಸ್ಕೃತಿ' ಅಮ್ಮ
ಗಂಡು ಹೆಣ್ಣುಗಳ ವ್ಯತ್ಯಾಸ ತಿಳಿಯದೆ
ಉಡುಗೆ-ತೊಡುಗೆಗಳ ಬೇಧವರಿಯದೆ
ಹಾಕಿದ ಲೆಕ್ಕಾಚಾರಗಳು ಹಿಡಿತ ಸಿಗದೆ

ಕಕ್ಕಾಬಿಕ್ಕಿಯಾಗಿ ನಲುಗುತ್ತಿದ್ದಾಳೆ 'ಸಂಸ್ಕೃತಿ' ಅಮ್ಮ
ತನ್ನ ತನದ, ತನ್ನ ಅಸ್ತಿತ್ವದ ಉಳಿವಿಗಾಗಿ
ಹೋರಾಟದ ಹಾದಿ ತಿಳಿಯದೆ
ಗೊಂದಲದ ಮಡುವಲ್ಲಿ ಮುಳುಗುತ್ತಿದ್ದಾಳೆ
ನಮ್ಮ 'ಸಂಸ್ಕೃತಿ' ಅಮ್ಮ.

- ಡಿ. ಸುಜಲಾದೇವಿ, ಶನಿವಾರಸಂತೆ

# ಉತ್ಸವ ಮೂರ್ತಿ

ನಿನಗಿಲ್ಲ ಅಹಂಕಾರದ ಕಲೆ
ನಿಂತಿರುವೆಯಲ್ಲ ಇಂದ್ರಗಿರಿಯ ಮೇಲೆ
ಬೆತ್ತಲೆಯ ನೆಲೆಯಲ್ಲೆ
ಕಂಡುಕೊಂಡಿರುವೆ ಅಹಿಂಸೆಯ ಬೆಲೆ

ಹನ್ನೆರಡು ವರ್ಷಗಳಿಗೊಮ್ಮೆ
ನಡೆಯುವುದು ಮಹಾಮಸ್ತಕಾಭಿಷೇಕ
ಆ ಜಾತ್ರೆಯಲ್ಲಿ ತೇಲುವುದು
ಬೆಳಗೊಳದ ಲೋಕ

ಗಾಳಿ, ಮಳೆ, ಚಳಿಯಲ್ಲಿ
ಅಚಲವಾಗಿ ನಿಂತಿರುವ ನೀನು
ಹಸಿವು - ಬಾಯಾರಿಕೆಗಳ
ಹಂಗಿಲ್ಲದ ನೀನು
ಉತ್ಸವ ಮೂರ್ತಿಯಾಗಿ
ಕಂಗೊಳಿಸುತ್ತಿರುವೆಯಲ್ಲ
ಇಂದ್ರಗಿರಿಯಲ್ಲಿ

ನಿನಗೆ ಸರಿಸಾಟಿಯಾರು?
ರಾಜ್ಯ, ಪದವಿ, ಹಣಗಳಿಕೆಗಾಗಿ
ಹೊಡೆದಾಡುವ ಮಾನವಜೀವಿಗಳಿಗೆ
ನಿನ್ನ ನೀತಿಯಾದರೂ ತಿಳಿದಿದೆಯೇ?

ಕನ್ನಡ ನಾಡಿನ ಸಂಸ್ಕೃತಿ
ಕೀರ್ತಿ ಪತಾಕೆ
ವಿಶ್ವದೆತ್ತರಕೆ ಕೊಂಡೊಯ್ದಿರುವ
ಮಹಾಮೂರ್ತಿಯೇ
ಹರಡುವೆಯ ವಿಶ್ವಶಾಂತಿಯ ಮಂತ್ರವ.

- ಡಾ. ಎ.ಎಚ್. ಚಂದ್ರಶೇಖರ್, ಮಡಿಕೇರಿ

# ಕಾಡು ಕವಿತೆ



ನನ್ನ ಜನರೇ,
ನಿಮ್ಮಲ್ಲುಕ್ಕುವ ಜಲಪಾತಗಳ
ಅಲ್ಲಿ ಪಾಚಿಗಟ್ಟಿದ ಉರುಟುರುಟು ಎಲುಬುಗಳ,
ನಿಮ್ಮ ಸಿಂಡುಗಳ
ಮೊಳಕೆಯೊಡೆವ 'ಮಹುವಾ'ಬೀಜಗಳ
ಇಂಚಿಂಚು ಆವಾಹಿಸಿ ನಿತ್ಯ ಮೋಹಿಸುತ್ತೇನೆ

ಉಬ್ಬಿಕೊಂಡ ನಿಮ್ಮ ಗಟ್ಟಿತೋಳುಗಳ ಏರು ಉಬ್ಬುಗಳಲ್ಲಿ ಕುಳಿತು
ಅವುಗಳ ಹುಲ್ಲುಹಾಸಿನ ಮೇಲಿನ ಮೊಲದ ಮಲದ ಹರಳು ಕಣಗಳನ್ನು
ಎಲ್ಲೋ ಕಂಡುಹಿಡಿದ 'ದೇವಕಣ'ದಂತೆ ಪ್ರೀತಿಸಿ, ಪರೀಕ್ಷಿಸುತ್ತೇನೆ

ಉದುರುತ್ತಿರುವ ನಿಮ್ಮ ಕೂದಲು
ಅದರ ಹಸಿರು
ಬೊಕ್ಕತಲೆ-
ಅರ್ಜಿ ಹಾಕುತ್ತೇನೆ
'ಅಲ್ಲಿ ಮಳೆ ಬೀಳಲು ಜಾಗಕೊಡಿ!'
ಅವರು ಬರುತ್ತಾರೆ
ನೆತ್ತಿಯ ಮೇಲೆ ಕೂದಲು ಕಸಿಮಾಡಲು
ಪರವಾನಗಿಯ ಪತ್ರ ಹಿಡಿದು!

ನಿಮ್ಮ ಪಾದದ ಕಪ್ಪುಮಣ್ಣಿನ ಉಗುರಿಗೆ ಪಾಲಿಶ್ ಬಳಿಯಲು,
ಅಲ್ಲಿ ಅರಳುವ ಪ್ಲಾಸ್ಟಿಕ್ ಹೂವುಗಳನ್ನು ಮೋಹಿಸಲು
ಎಷ್ಟು ಕಾರುಗಳು ನಿಮ್ಮ ಬಳಿಗೆ ಝುರಿಯಾಗಿ ಹರಿದು ಬರಲಿವೆ?
ಅಥವಾ ನಿಮ್ಮ ಝುರಿಯಲ್ಲೇ ತೇಲಿ-ತೇಲಿ ಬರಲಿವೆ!

ನಿಮ್ಮ ಸೊಂಟದಂಚಲ್ಲೇ ಬಳುಕಿಕೊಂಡಿದ್ದ ಬೆತ್ತಕ್ಕೆ
ಅಷ್ಟು ಹಿಂಸೆಯನ್ನು ನಾಟಿ ಮಾಡಿದವರಾರು?
ಯಾಕೆ ಗುಟುರುಗುಟ್ಟುತ್ತವೆ ಅವು ನಿಮ್ಮ ಸಿರು ತಾಕಿದೊಡನೆ?


ನಿಮಗೆ ಕೊಳ್ಳಿಬಿದ್ದ ದಿನ
ಸುಟ್ಟ ರೋಮದ ತರಗುಗಳು
ಮಲ್ಲಿಗೆಯ ಬಿಳಿದಳಗಳಾಗಿ ಹೇಳಿಕೊಳ್ಳಲು ಹಾರಿಬರುತ್ತವೆ
ಮುಟ್ಟಿದರೆ ಒರಟು ಕೈಗಳಲ್ಲಿ - ಬರಿಯ ಬೂದಿ!

ಅಷ್ಟು ಹಸಿವಾಯಿತೆಂದರೆ,
ಕಾರಿನ ಚಕ್ರ- ಬಂದೂಕುಗಳನ್ನು ನುಂಗಿಬಿಡಿ...
ಒಂದು ಕಾಳಿಂಗ, ಒಂದು ಜಿಂಕೆ
ಜೋಮುಗಟ್ಟಿದ ನಿಮ್ಮ ಮೈಗೆ
ಕಚಗುಳಿಯಿಡಲು ಬದುಕಿಕೊಂಡಿರಲಿ

ನನ್ನ ಜನರ ಬಣ್ಣಗಳ ಅನುಕರಿಸುವ ಅಮವಾಸ್ಯೆಗಳೇ,
ಬಿಳುಚಿಕೊಳ್ಳಿರಿ ಸ್ವಲ್ಪ
ಅಣಕಿಸುವ ಹುಣ್ಣಿಮೆಗಳೇ
ತುಸು ಮಂಪರು ತರಿಸಿಕೊಳ್ಳಿ ಕಣ್ಣಿಗೆ!

- ಕಾಜೂರು ಸತೀಶ್, ಕರಿಕೆ

# ತಂಗಾಳಿಯ ಅಳಲು



ಸುಳಿವ ತಂಗಾಳಿ ಉಲಿಯುತಿಹುದು
ಎನ್ನಂತರಾಳವ ಬಲ್ಲಿರೇನು?
ಬೆಂದ ಮನಗಳ ಬೆಸೆವಿರೇನು?
ಬನ್ನಿ ಸಾರುವ ಐಕ್ಯ ಗೀತೆಯ ||ಪ||

ಬಳಲಿದವರಿಗೆಂದು ನಾ ಬಂದೆ
ಅವರಲ್ಲಿರಲಿಲ್ಲ ಒಂದೆಂಬ ನಂಬೆ
ನಾ ತೋರೆ ಅವರಲಿ ಅಪಸ್ವರವನು
ಎನ್ನರಿತವರು ಇಲ್ಲಿರುವರೇನು? ||೧||

ಉತ್ತುಂಗದ ಶಿಖರಕ್ಕೆ ತಂಪಾದರೂ
ಬತ್ತಿದ ನಾಡಿಗೆ ಬೆಂಗಾವಲಾದರೂ
ಸೋತ ಮನಕೆ ಗರಿ ಮೂಡಿಸಿದರೂ
ಅವರರಿತ್ತಿರುವರೇ ಎನ್ನಳಲನು? ||೨||

ಸ್ನೇಹ ಬಯಸುವರು ಎನ್ನಿಂದ
ಲಾಭ ಪಡೆವರು ಅನ್ಯರಿಂದ
ಮೋಹಕ್ಕೆ ಸಾಲದೆಂಬಂತೆ ಬಡಿದಾಡುವರು
ಇವರಾಶಾಗೋಪುರಕ್ಕುಂಟೆ ಮಿತಿಯೆಂಬ ಚಿಂತೆ? ||೩||

ಎನ್ನೊಲವ ಮರೆಯದಿರಿ
ಬೇರೆಯವರ ಜರೆಯದಿರಿ
ತನ್ನತನವ ತೊರೆಯದಿರಿ
ಸರ್ವಹಿತವೇ ನನ್ನ ಗುರಿ ||೪||

- ರಾಘವೇಂದ್ರ ಹೆಚ್.ಎ., ಮೂರ್ನಾಡು

# ಸಾವು

ಉಸಿರು ನಿಲ್ಲುವ ಮುನ್ನ
ಕಣ್ಣಾಲಿಗಳು ತೇವಗೊಳ್ಳುತ್ತವೆ
ಉಸಿರಾಡುವ ವ್ಯಾಮೋಹಕ್ಕೋ ಎಂಬಂತೆ
ಎದೆಯ ಗೂಡು ಪ್ರತಿಭಟಿಸುತ್ತದೆ;
ಯಾಕೋ?! ಏನೋ?!...
ಎಲ್ಲೆಲ್ಲೂ ಅಪಶಕುನ...
ಸಾವಿನ ಕೋಣೆಯೊಳಗೆ
ಕೆದಕಿ ಕೆದಕಿ ಕೊಲ್ಲುವ ನೀರವ ಮೌನ!
ಘಳಿಗೆಗಳು ತಾಸಾದಂತೆ
ಆಗೊಮ್ಮೆ-ಈಗೊಮ್ಮೆ ಸದ್ದು ಮಾಡುವ ನಿಟ್ಟುಸಿರುಗಳು
ಎಲ್ಲಿಂದಲೋ ಬಂದು ಕದ ತಟ್ಟುವವು
ಬರಲೇಬೇಕಾದ ಸಾವಿನ ನೆರಳುಗಳು...

ಸಾವಿನ ನೆರಳು ಸಮೀಪವಾದಂತೆ
ಕಟ್ಟಿ ಹಾಕಿದ ನಾಯಿಗೆ ಇಂದ್ರಿಯಾತೀತ ಅನುಭವ!
ಒಡೆಯನ ಅಂತರ್ಧಾನದ ಮುಹೂರ್ತವೋ ಎಂಬಂತೆ
ಜಗ್ಗಿ-ಎಳೆದಾಡಿ ಊಳಿಡುತ್ತದೆ...

ಜೀವ ಜಲ, ಗಂಟಲಿಗಿಳಿದಂತೆ
ನಾಲಗೆಗೆ 'ಜನ್ಮಜನ್ಮಾಂತರಗಳ ಬಾಯಾರಿಕೆ'!
ಆತ್ಮ ಸಾಕ್ಷಾತ್ಕಾರವಾದಂತೆ-
ಹೆಮ್ಮೆಯ ಮೆಚ್ಚಿನ ದೇಹ ಬವಳಿ ಬಂದಂತಾಗುವುದು

ಯಾವುದು ಸತ್ಯ? ಯಾವುದು ಸುಳ್ಳು?
'ಪ್ರಶ್ನೆಗಳು' ನಮ್ಮಲ್ಲಿಯೇ ಉಳಿದುಕೊಳ್ಳುವುದು
ಗುಟುಕಲಾರದ ಉಳಿದ ಗಂಗಾಜಲ
ತುಟಿಯಂಚಿನಿಂದ ಜಾರಿ ಹೊರ ಬರುವುದು...

ಆ ಕಣ್ಣುಗಳಲ್ಲಿ ಮಾತ್ರ
ಯಾವುದೋ ಭಯ, ಹತಾಶೇ, ಉದ್ವೇಗ
ಇನ್ನೂ ಯಾರನ್ನೋ ಕಣ್ತುಂಬಿಕೊಳ್ಳಬೇಕಾದ ಭ್ರಾಂತಿ
ಯಾವುದನ್ನೋ ಕಂಡ ಆತ್ಮತೃಪ್ತಿ...!

ಮರದ ಮೇಲಿನ ಒಣ ಎಲೆಯೊಂದು
ಸದ್ದಿಲ್ಲದೆ ನೆಲ ಸೇರುವುದು...
ಹಿಂದಿರುಗಿ ಬಾರದ ಲೋಕಕ್ಕೆ
ನಮ್ಮವರೊಬ್ಬರು ಹೋಗಿ ಬಿಟ್ಟರಲ್ಲಾ ಎಂಬ ಸತ್ಯ
ದುಃಖ ಕಾಡುವುದು...

- ಜಾನ್ ಸುಂಟಿಕೊಪ್ಪ

# ನಾನು ಮತ್ತು ನನ್ನ ಆಗಸ

ನಾನು ಪ್ರೀತಿಸುತ್ತಿರುವ
ಆಗಸ ಸೇರಲು
ನೂರು ಬಾರಿ ಆಗಸಕ್ಕೆ
ಏಣಿ ಇಟ್ಟರೂ ಏರಲಾಗಲಿಲ್ಲ

ಛಲ ಬಿಡದ ತ್ರಿವಿಕ್ರಮನಂತೆ
ನೂರ ಒಂದನೇ ಸಲ
ಏಣಿ ಇಡಲು ಹೋದೆ

ಅರೆ! ಏನಾಶ್ಚರ್ಯ
ಆಗಸವೇ ಬಾಗಿ ನನ್ನೆಡೆಗೆ
ಬರುತ್ತಿದೆ
ನನ್ನನ್ನು ಬಿಗಿಯಾಗಿ ಅಪ್ಪಿ
ಹಿಡಿದೆತ್ತಿ ಮೇಲೆ ಮೇಲಕ್ಕೆ
ಕರೆದೊಯ್ಯುತ್ತಿದೆ

ಸೂರ್ಯ, ಚಂದ್ರ, ನಕ್ಷತ್ರಗಳು
ನಮ್ಮನ್ನು ನೋಡಿ ನಾಚಿ
ಮೋಡದ ಮಧ್ಯೆ ಮರೆಯಾದವು
ಈಗ ಇಲ್ಲಿರುವುದು ನಾನು
ಮತ್ತು ನನ್ನ ಆಗಸ ಮಾತ್ರ

- ಸಹನಾ ಕಾಂತಬೈಲು, ಬಾಲಂಬಿ

# ಜ್ಞಾನಪೀಠ

ಕನ್ನಡಮ್ಮನ ಕಿರೀಟಕ್ಕೇರಿತ್ತು
ಮತ್ತೊಂದು ಮುತ್ತು
ಚಂದ್ರಶೇಖರ ಕಂಬಾರರ
ಜ್ಞಾನಪೀಠ ಸೊತ್ತು

ಕನ್ನಡ ಸಾಹಿತ್ಯ ಸಾಗರದ
ಅಂತರಾಳದ ಚಿಪ್ಪಿನಲಿ
ಜ್ಞಾನಪೀಠವೆಂಬ
ಅಷ್ಟಮ ಮುತ್ತು

ಕಸ್ತೂರಿ ಕನ್ನಡದ
ಸಾಹಿತ್ಯಕ್ಕೆಲ್ಲೆಲ್ಲೂ ಹಿರಿಮೆ
ಕನ್ನಡವನಾಡಲು
ಮಾಡುವಿರೇಕೆ ಕೀಳರಿಮೆ?

ಹಸಿರು ಬನಸಿರಿಯಲ್ಲಿ
ಪಸರಿಸಿದೆ ಕಸ್ತೂರಿ ಕನ್ನಡದ ಕಂಪು
ರಾಜಧಾನಿಯಲ್ಲಿ ತುಂಬಿ ತುಳುಕುತ್ತಿದೆ
ಪರಭಾಷೆಗಳ ಸೊಂಪು

ಕನ್ನಡವನಾಡಿದರೆ ಮೂಗು ಮುರಿಯುತ್ತಾರಲ್ಲಿ
ಬೆಂದಕಾಳೂರು ಬ್ಯಾಂಗ್‌ಳೂರ್ ಆಗಿ
ಕನ್ನಡವದು ಕೆನಡಾ ಆದಂತೆ
ಮುಖದಲ್ಲಿ ವಾಂಗಿಬಾತ್ ನಗುಚೆಲ್ಲಿ
ಕೇಳುತ್ತಾರೆ 'ಯು ನೋ ಇಂಗ್ಲೀಷ್?'

ಕನ್ನಡಿಗರು ನಾವು
ಕನ್ನಡವನಾಡೋಣ
ಮಗದೊಂದು ಭಾಷೆಯ
ಮತ್ತೆ ಕಲಿಯೋಣ

ಸಾಲುಗಟ್ಟಿ ನಿಂದಿರುವ
ಜ್ಞಾನಪೀಠಗಳ ಸವಿಯ
ಜಗಕೆ ತೋರೋಣ
ಜನಕೆ ತೋರೋಣ.

- ಎಂ.ಪಿ. ಪುಷ್ಪಲತಾ ಶಿವಪ್ಪ
ವೀರಾಜಪೇಟೆ

# ಸುಂದರ ಕೊಡಗು



ಹಸಿರು ಹಸಿರೇ ಹಸಿರು
ಅದು ಸುಂದರ ಕೊಡಗಿನ ಉಸಿರು
ಕಾವೇರಿ ನರ್ತನ ಜೋರು
ಕಾರ್ಮೋಡವೇ ನಾಡಿನ ದರ್ಬಾರು
ಕರುನಾಡ ಸುಂದರ ಕೇರಿ
ಅದು ನಮ್ಮೆಲ್ಲರ ಮಡಿಕೇರಿ

ಬೆಟ್ಟಗುಡ್ಡದಿಂದ ಶೃಂಗರಿಸಿದ ಬೀಡು
ಸುತ್ತಲೂ ಮೈನವಿರೇಳಿಸುವ ರೋಡು
ಜನಮನ ಸೆಳೆಯುವ ಸಂಪತ್ತಿನ ಕಾಡು
ಅದು ನಮ್ಮ ಸೌಂದರ್ಯ ನಾಡು

ಹಾರಂಗಿ ನಿಂತಿದೆ ಕೈ ಬೀಸಿ
ನಿಸರ್ಗಧಾಮ ಕೇಳುತ್ತಿದೆ ನಿಮ್ಮನ್ನರಸಿ
ಅಬ್ಬಿಯಲ್ಲೊಂದು ನೀರ ಸಿಂಚನ
ಕೊಡಗಲ್ಲೆಲ್ಲಾ ಕಾವೇರಿ ನರ್ತನ

ಅದು ಸುಂದರ ಕೊಡಗು ಜಿಲ್ಲೆ
ಇದು ಸೌಂದರ್ಯ ಮಲೆನಾಡ ಎಲ್ಲೆ
ಬನ್ನಿ ನೀವೆಲ್ಲರೂ ಇಲ್ಲೆ
ಆನಂದಿಸಿ ನಮ್ಮ ನಾಡ ಬೆಡಗಲ್ಲೆ

ನೀಡಿದೆ ಭಾರತ ಮಾತೆಗೆ ಸೈನಿಕರ ಸಾಲು
ಪರಿಚಯಿಸಿದೆ ವಿಶ್ವಕ್ಕೆ ಕಾಫಿ ಮಾಲು
ಕಟ್ಟೋಣ ಸೌಂದರ್ಯ ನಾಡು
ಅದು ಸುಂದರ ಕನ್ನಡ ನಾಡು

- ಅಬ್ದುಲ್‌ರಶೀದ್ ಪಿ.ಎ., ಕೊಳಕೇರಿ

# ಆದರೆ ಇದೀಗ ?



ಅಂತರಾತ್ಮದೊಂದಿಗೆ ಕನ್ನಡಿಯು
ಅಳಲು ತೋಡಿತು
ನಾರಿಯಂತೆ ನನ್ನಿಂದಾಗದು
ಕುಂಕುಮ ಹಚ್ಚಲೆಂದು
ಒಡೆದ ಬಳೆ ಚೂರುಗಳು
ಶಪಿಸಿತು ಕರ್ತೃವನ್ನು
ಒಡೆವಂತೆ ಮಾಡಿದಕೆ
ಮುತ್ತಮಾಲೆ, ತುಂಡು ತುಂಡಾಯಿತು
ಕಾಲ್ಗೆಜ್ಜೆಯಾಗಿ ಪಾದಕ್ಕೆ ಮುತ್ತಿಡಲು
ಪ್ರೇಮಿಸಿದ ರೇಷ್ಮೆ ಹುಳುವದು
ಪ್ರಾಣವಿತ್ತು ಜೀವ ಸೇರಿತು
ಸ್ತ್ರೀಯ ಮೈ ಹೊದಿಕೆಯಾಗಲು
ನೀರಲ್ಲಿಟ್ಟಿದ್ದ ಬೆಣ್ಣೆಯದು
ಒಂಟಿಕಾಲಲ್ಲಿ ನಿಂತು ಕರಗಿತು
ಕನ್ಯೆಯ ಕಣ್ಣ ಕಾಡಿಗೆಯಾಗಲು
ಅಲ್ಲಲ್ಲಿ ಹೂಗಳು ಅರಳಿದವು
ಸರಿಯಾಗಿ ಅರಳುವ ಮುನ್ನ
ಕಪ್ಪು ನೀಳ ಕೇಶವ ಸಿಂಗರಿಸಲು
ಗುಲಾಬಿ ಆತ್ಮಹತ್ಯೆ ಮಾಡಿತು
ಇವಳ ಸುಗಂಧ ದ್ರವ್ಯವಾಗಲು
ನಿಜ, ಇವಿಷ್ಟೂ ನಿಜ
ಮೂರು ದಶಕಗಳ ಹಿಂದಿನವರೆಗೂ
ಆದರೆ ಇದೀಗ, ಇವರು
ಎತ್ತ ಸಾಗಿರುವರು? ಯೋಚಿಸಿ !

- ಸುಚಿತ್ರ ಸಿ., ಮಡಿಕೇರಿ

# ಚುಟುಕುಗಳು



## ಚಿನ್ನ

ಹೆಂಡ್ತಿ ಕೇಳಿದಳು
ಚಿನ್ನ
ಕೊಡಿಸುವುದು ಹೇಗೆ
ಚಿನ್ನ
ಈಗ ಬಲು ದುಬಾರಿ
ಚಿನ್ನ
ಅದಕೆ ಆಕೆಯ
ಮನವೊಲಿಸಲು
ಎನ್ನಬೇಕಾಗಿದೆ
ಚಿನ್ನ... ಚಿನ್ನ...

## ಗಣಿ

ಗಂಡ, ಹೆಂಡ್ತಿಗೆ
ಹೀಗೆ ಹೇಳಿದ
'ಪ್ರೀಯೆ, ಕಪ್ಪಾದರೂ
ನೀನು ಸೌಂದರ್ಯದ ಗಣಿ'
ಹೆಂಡ್ತಿ ಹೇಳಿದಳು
ಅಯ್ಯೋ! ಸ್ವಲ್ಪ ಮೆಲ್ಲಗೆ ಹೇಳಿ
ಕೇಳಿಸಿಕೊಂಡಾರು
ಬಳ್ಳಾರಿ ದಣಿ.

- ಎನ್. ಮಹೇಶ್, ಕೂಡ್ಲೂರು ಚೆಟ್ಟಳ್ಳಿ

# ಚುಟುಕುಗಳು



## ಸಂಸಾರ

ಸಂಸಾರ
ಸಂತಸದ ಸಾಗರ!
ಅನುಮಾನ
ಬಂತೆಂದರೆ
ಉದ್ಭವಿಸುವುದು
ದುಃಖದ ಸಾಗರ.

## ಕೈಲಾಸ

ಬಸವಣ್ಣ ಹೇಳಿದ್ದು
ಕಾಯಕವೇ
ಕೈಲಾಸ!
ಆದರೆ ಇಂದು
ಹಣವಿದ್ದರೆ
ಜೀವನದ ವಿಕಾಸ.

## ನೆರಳು

ನೆರಳು ಹಗಲಿನಲ್ಲಿ
ಜೊತೆಗಾರನಂತೆ!
ಇರುಳಿನಲ್ಲಿ
ವಿಕ್ರಮಾದಿತ್ಯ
ಬೇತಾಳದಂತೆ!
ಆದರೆ ನೆರಳು
ಮಾನವನ
ಸಂಗಾತಿಯಂತೆ

-ಸಂದೇಶ್ ಜೋಸೆಫ್ ಡಿಸೋಜ, ಸುಂಟಿಕೊಪ್ಪ

ಕೊಡವ ಭಾಷೆ ಕವನ

# ನಾಡೋರ್ ಆಸೆ

ಕೆರ್‌ತ ಬಾವುರ
ಇರ್‌ಟ್‌ರೊಳ್‌ಲ್ ಬೊಳಿ
ಕಾಡುವ ಬೊಳ್‌ಕ್
ನಾನಾಂಡುಂದಾಸೆ

ಅಜ್ಞಾನತ್ ಅಡಂಗ್‌ನ
ಕೆಟ್ಟ್ ಕೋಮಾಳಿಯಕ್
ಬೊಳಿ ಕಾಟುವ ಬೊಳ್‌ಚ
ನಾನಾಂಡುಂದಾಸೆ

ಒಡಿ ಒಡಿ ಗುಡ್ಡೆ ಕೂಡುವ
ಮೋಡತ್‌ರೊಳ್‌ಂಜ ಉಳಿತ್
ತುಳಿತುಳಿ ಭೂವ ಮಳೆ
ಯಾಂಡುಂದಾಸೆ

ಪರಂದ್ ಓಲಾಡುವ ಪೊಳೆ
ಸಾಗರತ್‌ರ ಅಲೆಯಾಂಡುಂದಾಸೆ
ರಂಗ್‌ರಂಗ್‌ರ ಪೂವಾಯಿ ಬೀಂದ್
ಪರಶಿವಂಡ ಸೇವೆ ಮಾಡುವಾಸೆ

ಕಾಡ್ ನಾಡೆಲ್ಲಾ ಪಾರಿ ಸುತ್ತಿ
ಪಣ್ಣ್ ಫಲ ತಿಂಬ ಪಕ್ಷಿ ನಾನಾಪ ಆಸೆ
ಪಚ್ಚೆ ಪಚ್ಚಡ ಪಚ್ಚೆ ರಂಗ್‌ಡ
ಭೂಮಿ ನಾನಾಪ ಆಸೆ

ಮಠ ಮಂದಿರತ್ ಎಲಂಗುವ
ಆಂದಿ ತೀರಿ ಆಪ ಆಸೆ
ಭೂತಾಯಿ ಒಡ ನೆನತುವ
ಮಂಜಿ ತುಳಿ ಆಪ ಆಸೆ

ಕರ್‌ತ ಬಾವುರ
ಇರ್‌ಟ್‌ರೊಳ್‌ಲ್
ಬೊಳಿ ಕಾಟುವ ಬೊಳ್‌ಕ್
ನಾನಾಂಡುಂದಾಸೆ.

- ಮಳುವಂಡ ನಳಿನಿ ಜಿಂದು, ಅರಮೇರಿ

# ನಾಡ್‌ರ ಎಳ್ತ್

ಅಂಗೈ ಅಗಲತ ನೆತ್ತಿಲ್ ಬ್ರಹ್ಮಂಡ ಎಳ್ತ್
ನಲ್ಲದ್, ಕೆಟ್ಟದೆಲ್ಲಾ ಅರಿವಕ್ ಕಯ್ಯತ ಎಳ್ತ್
ನಲ್ಲದಾಚೇಂಗಿ ಮನಸ್ಸ್‌ಕ್ ಕುಶಿ, ಕೆಟ್ಟದಾನಕ ಅವಂಡ ಕರ್ಮಫಲ
ಆಪದ್, ಪೋಪದೆಲ್ಲಾ ಭಗವಂತಂಡ ಇಚ್ಛೆ ||

ಮೂಡ್ ನೋಟ್‌ವಕ್ ಚಾಯುಂಡೇಂಗಿ ಪೋರ
ಮೂಡ್ ಎಕ್ಕಲೂ ತೆಳಿ, ತೆಳಿಯಾಯಿತಿರಂಡು
ತೆಳಿ ಮೂಡ್‌ಲುಂಡ್ ಲಕ್ಷ್ಮಿಕಳೆ ಎಲಂಗುವ ಮೂಡ್
ತೆಳಿಮೂಡೇ ಭಾಗ್ಯ ಬರ್ಕತ್ ||

ನೋಟ್‌ವಕ್ ಎಲ್ಲಾ ಮಾನವಂಗ
ಎದೆರೊಳ್‌ಲ್ ಇಲ್ಲೇ ಮಾನ, ಮಮಕಾರ
ಮನಸ್ಸ್‌ರೊಳ್‌ಲ್ ಉಂಡ್ ಕೇಡ್ ಕಿಚ್ಚಿರ ಚೆಪ್ಪ
ಎಲ್ಲಾ ತಾಂಡದೇ ಎಣ್ಣ್‌ವ ಸ್ವಾರ್ಥತ್‌ರ ಗೂಡ್ ||

ಮನುಷ್ಯಂಡ ಮನಸ್ಸ್ ಕ್ಷಣ, ಕ್ಷಣ ಬದ್‌ಲ್
ಗಾದೆಲುಂಡ್, ಪಚ್ಚೆ ಮನುಷ್ಯಂಗ್ ಪದ್‌ನೆಟ್ಟ್ ತರ ಬುದ್ಧಿ
ಸಮಯ ನೇರ ಘಳಿಗೆ ಇಲ್ಲತ ಮನಸ್ಸ್
ಚಂಚಲ ಮನಸ್ಸ್‌ರ ಬುದ್ಧಿಜೀವಿಯ ||

ತಾಂಡ ಮನಸ್ಸೇ ತಾಂಗಿಲ್ಲೆ ತಾಯಿರುವ
ಆಯಿರ ಪರ್‌ಂದಕ ಅರೆಪಣ ತೂಂಗತ ಮನಸ್ಸ್
ಮನುಷ್ಯಂಡ ಮನಸ್ಸ್ ಕ್ಷೀರಸಾಗರ
ಬುದ್ಧಿಯೇ ಕಡಿಯುವ ಕೋಲ್ ||

ಮನಸೇ ಕಡ್‌ಂದ ಮೋರ್... ಅದ್‌ಂಜ
ಬಪ್ಪ ಬೊಣ್ಣೆನೈಯಿಯೇ ಸಂಸಾರತ್‌ರ ರಸ
ಸ್ಥಿರ ಬೋಂಡ್ ಮನಸ್ಸ್‌ಕ್ ಅರಿವಿರೊಂಡ್ ತಕ್ಕ್‌ಲ್
ಗುರಿ ಬೋಂಡು ಬದ್‌ಕ್‌ಕ್.

- ನಾಯಕಂಡ ಬೇಬಿ ಚಿಣ್ಣಪ್ಪ, ಬೋಯಿಕೇರಿ

# ದಿನಚರಿ



ಎಳ್‌ದುವಂಡುಂಡ್ ಆಚಿ ಮನಸ್ಸ್‌ಲ್ ಒರ್ ಕವನ
ಈ ಕಲಿಕಾಲತ್‌ನ ಈ ಪ್ರಪಂಚತ್‌ನ
ಗೇನ ಮಾಡಿತ್ ಎಳ್‌ದಿಯ ಈ ಕವನ
ಟಿ.ವಿ. ನೋಟಿತ್ ಪತ್ರಿಕೆ ಓದಿತ್
ಈ ಪ್ರಪಂಚತ್‌ರ ದಿನಚರಿನ
ಎಳ್‌ದಿಯ ಕವನ

ಅಲ್ಲಿ ಆ ಜಾಗತ್ ಅಬ್ಬಾ ಅಬ್ಬಾ ಊರ್ತ ಮಾರಿಯಡ ಹಾವಳಿ
ಬಾಂಬ್ ಸದ್ದ್ ಬೊಡಿಕಳಿ ಕುತ್ತ್‌ಕೊಲೆ
ಚಾವು ಬದ್‌ಕ್‌ರ ಮಧ್ಯ ಜನಡ ಗೋಳ್
ಕೇಪವನೆ ಇಲ್ಲೆ ಈ ಪ್ರಪಂಚತ್
ಗರಿಬಡ ಬದ್‌ಕ್‌ನ
ದುಡ್ಡ್‌ಕಾರಡದೆ ದರ್ಬಾರ್

ಇಲ್ಲಿ ಒರ್ ಬರಿಲ್ ಮಳೆ ಇಲ್ಲತೆ ಗೋಳ್
ಅಲ್ಲಿ ಒರ್ ಬರಿಲ್ ಮಳೆ ಪೊಜ್ಜಿತ್ ಗೋಳ್
ಒರ್ ಪೊತ್ತ್‌ರ ಕಂಜಿಕ್ ಗತಿ ಇಲ್ಲತ ರೈತಂಡ ಗೋಳ್
ಕೇಪವನೆ ಇಲ್ಲೆ ಈ ಪ್ರಪಂಚತ್
ದುಡ್ಡ್‌ಕಾರಡದೆ ದರ್ಬಾರ್

ಒಮ್ಮ ನೋಟಿ ಪ್ರಪಂಚವೇ ರಾಜಕೀಯ ಪೈಪೋಟಿ
ದುಡ್ಡ್‌ಕಾರಡ ರೌಡಿಯಡ ಕುರ್ಚಿಕ್ ಪೊಯಿತ್ ಕಳಿ
ಕರ್ತಪಣ ಬೆಚ್ಚಂಡ್ ಕೂತ್‌ಪಡೆ
ದುಡ್ಡ್ ಉಳ್ಳವನೆ ಈ ಪ್ರಪಂಚತ್ ಅಧಿಪತಿ
ದುಡ್ಡ್ ಇಲ್ಲತವನೆ ಈ ಪ್ರಪಂಚತ್ ಬಿಕಾರಿ
ಈ ತಕ್ಕ್ ಪೊಟ್ಟ ಸತ್ಯಾಂದ್ ತೀರ್ಮಾನ ನಿಂಗಡದ್
ಈ ಪ್ರಪಂಚತ್‌ರ ದಿನಚರಿಯೆ ಈ ಕವನ.

- ಇಟ್ಟೀರ ಕೆ. ರಾಜಪ್ಪ, ತೂಚಮೇಕೇರಿ

# ತಿಂಗ ಪರ್ಂದತ್



ಎದ್‌ಪ್‌ಲ್ ಬಪ್ಪದ್ ಎಡಮ್ಯಾರ್
ಉಪ್ಪಳ ಎತ್ತ್‌ಕಟ್ಟಿ ದಂಡ್‌ಮಾರ್
ಮಳೆಲ್ ಕಯಿಂಜತ್ ಕಾದ್ಯಾರ್
ಪಚ್ಚೆ ಪಟ್ಟ್ ಉಡ್‌ತತದಾ ಬೇಲ್

ತೊರ್ಂಜತ್ ಮಳೆಯೋಃ ಆದರೆಲ್
ನಾಟಿ ದುಂಬ್‌ಚಿ ಆಕತ್‌ಲ್
ಮದ್ದ್‌ಪ್ರಟ್ಟ್ ಕೋಃಳಿಕರಿ ಗದ್ದಾಳತ್
ಕೇಃಂಬುಃರಿ ಕುಮ್ಮ್‌ಕರಿ ಕಕ್ಕಡತ್

ಚಿಂಞ್ಯಾರ್ ಪದ್‌ನೆಟ್ಟ್ ಕೈಲ್‌ಪೋಃದ್
ಕಡ್‌ಂಬುಟ್ಟ್ ಪುಃದಿಕರಿಕ್ ಮೀಃತದ್ ಏದ್
ಪೂಜೆಯೋಃ ಅಂದ್ ಹತ್ಯಾರ್‌ಕ್
ಕೂಡೆಯೋಃ ಉಪ್ಪಳ ಚೋಃಮಂಗಕ್

ಕೂಳ್‌ಕ್ ಕಷ್ಟವೋಃ ಕನ್ಯಾರ್‌ಲ್
ಪೊಲಿಕೆಡ್‌ತ್ ಉಂಬ ಈಃ ನೇಃರತ್‌ಲ್
ಕೂಳುಂಬಳ ದೇಃವಿರ ದಯತ್‌ಲ್
ಕಾಪವ ನಂಗಳ ಕೊಡಗ್‌ಲ್

ಬೊತ್ತ್ ಕುತ್ತಿ ತಕ್ಕಾರ ತೊಲ್ಯಾರ್‌ಲ್
ದೋಃಸೆಪುಟ್ಟ್ ಬೆಪ್ಪಲ ಬೇಃಲ್‌ಲ್
ಚಂಗ್ರಾಂದಿಕ್ ಪೋಃಕ ಕಾವೇಃರಿಕ್
ಕಾಲ್ಪುಡ್‌ಚಿ ಆಶೀಃರ್ವಾದ ಪತ್ತಾಲೋಃದಿಕ್

ಪುತ್ತರಿ ಬಪ್ಪದಾ ಬಿಚ್ಯಾರ್‌ಲ್
ಕದ್‌ನೆಡ್‌ತಂಡ್ ಬೆಪ್ಪ ನೆಲ್ಲಕ್ಕಿಲ್
ಏಳಕ್ಕಿ ತಂಬುಟ್ಟ್ ಪುತ್ತರಿಕ್
ಪಾಡಿ ಆಡ್ವಕ್ ಪೋಕ ಮಂದ್‌ಕ್

ದಾಟಿತ್ ಬಾತ್ ದಲ್ಮ್ಯಾರ್
ಮಾರಿ ಕುಳ್‌ರ್‌ದ್ ಮಾಲ್ಯಾರ್
ಕಲ್ಲಾಡ್ಚ ನಮ್ಮೆ ಕುಂಬ್ಯಾರ್‌ಲ್
ಕಾತಳ್‌ತಿತ್ ದೇವಯ್ಯ ಮಲ್ಮತ್‌ಲ್

ದೇವ ಕೊಡಿ ನಿಪ್ಪ ಮೀನ್ಯಾರ್‌ಲ್
ದೇವ ದೇವಿಯಕ್ ಆಚಾರ ಆ ತಿಂಗತ್‌ಲ್
ಪನ್ನೆರಂಡ್ ತಿಂಗ ಪರ್‌ಂದತ್
ಎಡಮ್ಯಾರ್ ತೊಟ್ಟ್ ಮೀನ್ಯಾರ್‌ಕ್

- ಮುಲ್ಲೇಂಗಡ ರೇವತಿ ಪೂವಯ್ಯ, ವೀರಾಜಪೇಟೆ

# ನಾಡ ನಾಡ್



ಕಾವೇರಿ ತಾಯಿ ಪುಟ್ಟ್‌ನ
ವೀರ ಶೂರಂಗ ಜನ್ಮಪಡ್‌ಂದ
ಈ ಮಣ್ಣ್ ನೆಲ
ಎಂದೂ ಮರೆಯಾಕತಿರಡ್

ಪಚ್ಚೆಲ್ ಬೊಳ್‌ಂಬ್ ನಿಂದಿತುಳ್ಳ
ಬೇಲ್-ಬಾಣೆ, ಕುಂಬ್-ಕಾಡ್
ತೋಡ್-ತೊಡಿಯ, ಕೊಲ್ಲಿ-ಪಾರೆ
ಚಾಯಿ ಎಂದೂ ನಾಶವಾಕತ್ತಿರಡ್

ಯಾಲ-ಮಳು, ಕಾಫಿ-ನೆಲ್ಲ್
ಬೊಳೆಯುವ ಈ ಮಣ್ಣ್
ನೆಲತ್‌ರ ಘಮ ಪಾಳಾಕತೆ
ಶಾಶ್ವತವಾಯಿತ್ತಿರಡ್

ಚಾಯಿ ಬೋಜತ್‌ರ ನಾಡ್‌ಲ್
ಜನತೆರ ಮನತುಳ್ಳ
ಪ್ರೀತಿ-ವಿಶ್ವಾಸ ಅಭಿಮಾನತ್‌ರ
ಭಾವ ಎಂದೂ ದೂರಾಕ್ಕತಿರಡ್

ನಾಡಂದೆಣ್ಣತೆ ಎಕ್ಕಲೂ
ನಂಗಡಂದೆಣ್ಣುವ ಭಾವನೆ
ಎಲ್ಲಡ ಮನತ್‌ಲ್
ಎಕ್ಕಲೂ ಮೂಡಿಬರಡ್

ಅಶಾಂತಿ, ಅನ್ಯಾಯ, ಅನೀತಿಂದೆಣ್ಣುವ
ದುಷ್ಟ ಶಬ್ಧ ಈ ನಾಡ್‍ಲ್ ಕಾಂಗತೆ
ಜನಡಲ್ಲಿ ಉಳ್ಳ ಅಹಂಕಾರ ದೂರಾಪಂಜಿ
ಎಲ್ಲರೂ ಒಂದಾಯಿತ್ ಬಾಳನ

ಕೊಡಗ್‍ರ ಚಾಯಿ ಬೋಜ
ಸದಾ ನಂದಾಯಿತ್
ಕೊಡವಾಮೇರ ಪೊಂಬೊಳ್‍ಚ
ಎಲ್ಲೆಲ್ಲಯೂ ಎಲಂಗಿ ಕತ್ತಡ್

ಪಚ್ಚೆ ಪ್ರಕೃತಿರ ಚಾಯಿ
ಎಂದೂ ಮರೆಯಾಕತೆ
ಈ ಸೃಷ್ಟಿರ ಮಂದಾರ ಪೂ
ಉದ್‍ಚಿ ಮಿನ್ನಡ್.

- ಮೇಲಿಯಂಡ ಸುಮ ಅಯ್ಯಪ್ಪ, ವೀರಾಜಪೇಟೆ

# ಋಣ



ಏಳೇಳ್ ಜನ್ಮತ್‌ರ ಪುಣ್ಯತ್‌ರ ಫಲ
ಜನ್ಮ ಕಂಡ ನಾನ್ ಈ ಪುಣ್ಯತ್ ನಾಡ್‌ಲ್
ನಾಡ್‌ರ ಗಾಳಿ ನೀರ್ ಕುಡ್‌ಚಿ ಬೊಳಂದ
ಕೂಳ್ ನೆಲೆ ತಂತ್ ಪೊಳ್ತ್‌ನ ಮಣ್ಣಲ್
ತೀಕಡ್ ಎನ್ನನೆ ಈ ಮಣ್ಣ್‌ರ ಋಣ?

ನಲ್ಲರಿಮೆ ನಲ್ಲರಿಕೆಲ್ ಬಾಳಿ ಬದ್‌ಕಿತ್
ಬಯತ್‌ಲ್ ಅಪ್ಪವ್ವನ ಚಾಯೋಡೆ ಚಾಕಿತ್
ಮಾಡೋ ಕೆಲಸತ್ ಸತ್ಯ ಧರ್ಮ ಬೆಚ್ಚಂಡ್
ಪುಣ್ಯತ ನಾಡ್‌ನ ಕೊದಿಪೊ ಮಕ್ಕಳ ಬೊಳ್ತಿತ್
ತೀಕನ ನಂಗ ಈ ಮಣ್ಣ್‌ರ ಋಣ

ಕೊಂಡಾಡನ ಈ ನಾಡ್‌ರ ಕೇಳಿ ಕೀರ್ತಿನ
ಕೈ ನೀಟಿ ದಾನಧರ್ಮ ಕುಷಿಲ್ ಮಾಡನ
ಕೆಲ ಉರಿ ದ್ವೇಷತ್‌ನ ದೂರಬೆಚ್ಚಿ ಬಾಳನ
ಪರಸೊತ್ತ್‌ಕ್ ಆಸೆ ಪಡತ ಬದ್‌ಕ್‌ನ ನಂಗ
ತೀಕಲು ಋಣತ್‌ನ ಈ ಕಾವೇರಿ ಮಣ್ಣ್‌ರ

ಮರಕತಿ ಎಂದೂ ನಾಡ್‌ರ ಆಚಾರ ವಿಚಾರ
ನಡ್ತಾನ ಕೊಡವಡ ಆಯಿಮೆ ಕೋಯಿಮೆ
ಬೊಳ್ತ್ಯೀನ ಮಣ್ಣ್‌ರ ಪ್ರೀತಿ ಅಭಿಮಾನ
ತೊಕ್ಕಾನ ಎಕ್ಕಾಲು ಕಾವೇರಮ್ಮೆ ಇಗ್ಗುತ್ತಪ್ಪನ
ತೀಕನ ಇನ್ನನೆ ಈ ಮಣ್ಣ್‌ರ ಋಣತ್‌ನ

ಒಗ್ಗಟ್ಟ್ ಒತ್ತೋರ್ಮೆ ಎಕ್ಕಲು ಬೋಂಡು
ಈ ಮಣ್ಣ್‌ನ ಕೊದಿಕಂಡು ಆಸೆ ಅಕ್ರತ್
ಪಚ್ಚೆ ಕಾಡ್‌ನ ಕಾಪಾಡನ ಬೊಳ್ತನ
ಚುಮ್ಮಿ ಕೊಡಗ್‌ರ ಬಲ್ಯ ಪೆದಕ್
ನೆಯಿಚಿತ್ ತೀಕನ ಈ ಮಣ್ಣ್‌ರ ಋಣ

- ಕೊಂಗಿರಂಡ ದಮಯಂತಿ ಕುಶಾಲಪ್ಪ, ಮಡಿಕೇರಿ

# ಒಂದಾಕನ ನಂದಾಕನ



ಉದಿಪ ಸೂರ್ಯಂಗೂ, ಬೀಜೋ ಗಾಳಿಕೂ ಕೇಡ್‌ಲ್ಲೆ
ಒಕ್ಕುವ ನೀರ್‌ಕೂ ಕತ್ತ್‌ವ ತಿತ್ತ್‌ಕೂ ಬೇಧ ಇಲ್ಲೆ
ಚತ್ತ ಚಾವುಕ್ ಪೆತ್ತ ಕುಂಞಿಕೂ ಕಟ್ಟ್‌ಲ್ಲೆ
ಆಚೆಂಗಿ ನರ ಮನುಷ್ಯ ನೀಕ್ ಮಾತ್ರ ಎನ್ನಾಂಗ್ ಅತಿ ಆಸೆಯೋ?

ಕ್‌ಣ್ಣ ಕುಂಞಿಕ್ಕಾಯಿತ್ ಕ್‌ಟ್ಟ್‌ವ ಇಂಜತ್ ಕನ್ನಿ ಕೋಂಬರೆ
ಕ್‌ಣ್ಣಕುಂಞಿ ಪೆತ್ತನಕೆ ತೋಕ್‌ಲ್ ಬೊಡಿ ಬೆಪ್ಪ
ಕ್‌ಣ್ಣ ಕುಂಞಿಕ್ಕಾಯಿತ್ ಕೂಟುವ ಬೊರೆಬೋರೆಯಿಂಗಡ ಆಸ್ತಿ
ಆ ಕ್‌ಣ್ಣ ಕುಂಞಿಯೇ ಬೈತ್‌ಲ್ ನಂಗಳ ದೊವುತ್‌ವದೇ ಜಾಸ್ತಿ

ನಾಡ ಮಣ್ಣ್, ನಾಡ ನಾಡ್ ಎಣ್ಣ್‌ವಯಿಂಗ ಪೆರ್ತ್
ಕುರ್ಚಿಕ್ಕಾಯಿತ್ ಈಯಂಗ ಮಾಡುವ ದುಂಬಾ ವರಾತ್
ಬುಡತಿ ನಂಗಡಯಿಂಗಳೆ ನಿಂಗಡ ಗತ್ತ್ ಗಮ್ಮತ್
ಅಕ್ಕಲೆ ನಂಗಡಲ್ಲಿ ಕಾಂಗೊಲ್ ಭಾಗ್ಯ ಬರ್‌ಕತ್

ಪತ್ತಾಯತ್ ನೆಲ್ಲ್‌ಕೆಟ್ಟಿ ಬೆಪ್ಪೊಯಿಂಜ ಕಾಲ
ಬೆದಕೆಲ್ ವಣಕ್ ಎರ್ಚಿ ಇಪ್ಪಯಿಂಜ ಕಾಲ
ಕಾಚ್‌ಂಗಳ್ಳ್ ಞಂಡ್ ಕರಿ ತಿಂಬಯಿಂಜ ಕಾಲ
ಇಂಞೊಮ್ಮಾಚೆಂಗಿಯೂ ಬಾ ನಂಗಡ ಬಾಲ್ಯ ಕಾಲ

ಊರ್‌ಲ್ ಮಂಗಲಕ್ ಒರ್ ದಿನಕ್ ಮಿಂಞಲ್ ಎಲ್ಲಾರೂ ಕೂಡಿತ್
ಪೊಟ್ಟಿ ನೋಟಿತ್ ಕಿಸೆ ಪರ್‌ದಂಡ್ ಕಳ್ಳ್‌ಕರಿ ಕುಡ್‌ಚಿತ್
ನಂಗೆಲ್ಲಾ ಕೂಡಿತ್ ವಾಲಗತ್ತಾಟ್ ಆಡಿತ್, ತೆಂಗೆಕ್ ಕಲ್ಲ್‌ಕಸ್‌ಚಿತ್
ಬಾಳಾನ ನಂಗೆಲ್ಲಾ ನಲ್ಲೋಡೆ ಈ ಕಾವೇರಿ ಮಣ್ಣ್‌ಲ್ ಒತ್ತ್ ಒರ್ಮಡೊ.

- ಎಂ.ಕೆ. ನಳಿನಾಕ್ಷಿ, ವೀರಾಜಪೇಟೆ

ಅರೆಭಾಷೆ ಕವನ

## ಅಂದ್-ಇಂದ್

ಕೊಕ್ಕರೆ ಕೋ ಕೋಳಿ ಕೂಂಗಿತ್
ಮೆಲ್ಲನೆ ಹೊತ್ತ್ ಬೆಳ್ಗಾತ್
ಬಡ್‌ಕಲ್ ಕೋಣನ ಕಟ್ಟಿಕಂಡ್
ಗದ್ದೆಲಿ ಅಪ್ಪ ಹೂಡ್‌ತಿತ್ತ್

ಕೊಕ್ಕರೆ ಕೋ ಕೋಳಿ ಸತ್ತೋತ್
ಸೂರ್ಯ ಬಂದ್ ತುಂಬಾ ಹೊತ್ತಾತ್
ಟಿಲ್ಲರ್ ಹಿಡ್‌ಕಂಡ್ ಗಂಬೂಟ್ ಹಾಕಂಡ್
ಮಂಜ ನಡಿತಿತ್ತ್ ಗದ್ದೆಲಿ

ಕರಕರ ಮೊಬೈಲ್ ಸದ್ದ್ ಮಾಡ್ತಿತ್
ಸಿಟ್ಟ್‌ಂದ ಸುಚ್ಚ್‌ನ ಜೋರಾಗಿ ಒತ್ತಿತ್
ಕಾಲೇಜ್ ಗೂಡೆ ಲೇಟಾಗಿ ಎದ್ದತ್
ಹಳೆಗನ್ನಡ ಪದ್ಯನ ಜೋರಾಗಿ ಓದಿತ್

ಮೊಬೈಲ್ ಬಡ್ಕಂಡ್ ಅದೆಷ್ಟೊ ಹೊತ್ತಾತ್
ಮೈಯಿಂದ ಕಂಬಳಿ ಜಾರಿಕಂಡ್ ಬಿದ್ದತ್
ರೊಟ್ಟಿ ತಟ್ಟುವ ಸದ್ದ್ ಒಳಗೆಂದ ಕೇಳ್ತ್
ಅವ್ವನ ಕರ್ಕಂಡ್ ಮಂಜ ಎದ್ದತ್

ಕೊಕ್ಕರೆ ಕೋ ಕೋಳಿ ಕೂಂಗಿತ್
ಅನ್ನದ ಮಡಿಕೆ ಕೊತ್ತಿ ಮಗ್‌ಚಿತ್
ಸದ್ದ್ ಕೇಳಿ ನಾಯಿ ಬಾರಿ ಬೊಗಳ್ತ್
ಹಂದಿ ಗೂಡ್‌ಂದ ಎದ್ದ್ ಓಡ್ತ್

ಕೊಕ್ಕರೆ ಕೋಳಿನ ಕುದ್‌ಕ ಹಿಡ್ತ್
ಕುಕ್ಕರ್ ವಿಷಿಲ್ ಕೇಳಿ ಕೊತ್ತಿ ಓಡ್ತ್
ಕೊತ್ತಿನ ನಾಯಿ ಬೆರ್ಸಿತ್
ಕೊತ್ತಿ ಮರ ಹತ್ತಿ ಕುದ್ದತ್

- ತೆಕ್ಕಡ ಜಿ. ಕುಮಾರ ಸ್ವಾಮಿ ಟಿ.ಜಿ.

# ಚಾಮೆವ್ವ ನೆಂಪಾದವೆ...!



ಬೆಳ್ಗ್ಜೆರಾಕನ ಎದ್ದ್, ಭತ್ತ ಮಿದ್ದ್..
ಚಿಮುಣೆಣ್ಣೆ ದೊಂದಿಲಿ ಉಮಿ ತೆಗ್‌ಡ್ ಅಕ್ಕಿ
ಬೇರೆ ಮಾಡಿ ಹೊಣ್ಸ್‌ಸಿಕೆ ಬೊತ್ತದ ಕಡ್ಕಲ್ಲ್‌ಲಿ
ಅಕ್ಕಿ ಕಡ್ದ್, ಹಿಟ್ಟ್ ಮಾಡಿ ಕಾಯಿ ಪೊಜ್ಜ್‌ಲಿ
ಕಂತ್‌ಸಿ ತಿನ್ಸ್‌ತಿದ್ದ.... ಚಾಮೆವ್ವ ಈಗ ನೆಂಪಾದವೆ!

ಎದೆ ನಡ್ಗುವ ಗುಡ್ಗು, ಜಿರಿಕುಟ್ಟ ಮಳೆಗೆ
ಸೋರುವ ಹುಲ್ಲುಮಾಡ್ ನೀರಿಗೆ
ಸೆಗ್‌ಣಿ ನೆಲ ಒಟ್ಟೆ ಆಗದಂತೆ, ಪಾಟೆ ಪಿಂಞಾಣಿಗ ಇಸಿ
ಪಿಳ್ಳಿಕ್ಕಳ ಒಲೆ ಬುಡಕ್ಕೆ ಕರ್ದ್, ಬಿಣ್‌ಗಿಲ್ ಹಿಟ್ಟ್-
ಕಿಚ್ಚ್‌ಕಿ, ಕಣ್ಣ ಕಾಫಿ ಕೊಟ್ಟ್, ಸೀಗೆ ಹೊಡಿಲಿ
ಬಿಸ್ನೀರ್ ಮೀಸಿ, ಗಂಧ ಧೂಪ ಹೊಗೆ ತಾಂಗ್‌ಸಿದ
ಚಾಮೆವ್ವ... ಈಗ ನೆಂಪಾದವೆ...!

ಹಟ್ಟಿ ತುಂಬ ಎಂಟತ್ತ್ ನಡೆ ದನಂಗ...
ಗುಡಾರಲೆಲ್ಲ ಮ್ಯೆಪ, ಉರಿಯ, ಕಡ್ತ, ಲಾಖಿಗ...
ಹುಳ್ಳಂಗೆ ಮೆಣ್ಸ್‌ಲಿ ಮಾಡ್ದ ಅಜ್ಜಿ ಹೇಂಟೆನ ಗೈಪು
ಭರಣೆ ಒಳಗೆ ಬೆಚ್ಚಂಗೆ ಇರುವ ಎರ್ಡ್ ವರ್ಷದ ಉಪ್ಪನಕಾಯಿ!
ಬಂದವ್ಕೆ ತಲೆನೋಡಿ ಎಣ್ಣೆಕೊಟ್ಟ್
ಹೊಟ್ಟೆ ನೋಡಿ ಗಂಜಿ ಕೊಟ್ಟ್...
ಅರೆಭಾಷೆ ಬುಟ್ರೆ, ಕೈ ಭಾಷೆನೇ ಕಲ್ತಿರುವ
ಚಾಮೆವ್ವ ಯಾಕೋ... ತುಂಬ ನೆಂಪಾದವೆ...!

ಗುಡ್ಡೆಗೆ ಹೋದರೆ ಮೊಟ್ಟೆಲಿ ಕಟ್ಟಿ ತಾವ...
ಚೂರಿ, ಗೊಟ್ಟೆ, ಮುಡ್ಕೆರ, ನೇರಳೆ ಹಣ್ಣ್‌ಗ...
ಸುರು-ಸುರು ನೆಗಡಿ ಕೆಮ್ಮ್‌ಲುಗೆ ಜೇನ್

ಒಳ್ಳೆಮಣ್ಸ್‌ನೊಟ್ಟಿಗೆ ಬೆರ್ಸಿ ಕೊಡುವ ಗೇರ್ದ ಸರಾಯದ ಬೂಚುಗ...
ಮನೆಲಿ ದರಿದ್ರ ಲಕ್ಷ್ಮಿ ಕೊಣಿತಿದ್ದರೂ.. ಕಣ್ಣೀರ್ ಹಾಕದೆ
ಮಕ್ಕಳಿಗೆ, ಪಿಳ್ಳಿಕ್ಕಳಿಗೆ ಹೊಸಕ್ಕಿ ಗಂಜಿ ಮಾಡಿ ತಿನ್ಸುವ ಹೊಸ್ತು ಊಟಗ...
ಯಾಕೋ.. ಚಾಮೆವ್ವ ತುಂಬಾ ನೆಂಪಾದವೆ...!

ಮಾಸದ ನೆಂಪುಗಳೊಟ್ಟಿಗೆ ದೊಡ್ಡದಾಗಿ ಇಂದ್ "ದೊಡ್ಡವಾಗಳೋ"
ಕಾರ್, ಬೈಕ್, ಆಸ್ತಿ, ಬೊದ್ಕು, ಹೆಸ್ರ್, ಜನ ಎಲ್ಲ ಒಳೋ...
ಆದರೇನ್...? 'ಎದೆಲಿ ಹೆದ್ರಿಕೆ ಗಂಟೆ' ಮನೆ ಮುಂದೆನ
ಕಬ್ಬಿಣದ ಗೇಟ್‌ಲಿ ನೇಲುವ... " **No Entry, No Parking**" ಬೋರ್ಡುಗ..!
ಮೊನ್ನ-ಮೊನ್ನನ ಸಂಬಂಧಗ 'ಯಾಪಾರ...' ಮನೆ-ಮನೆಗೆ ನಾಯಿಗ ಪಾಠ...!

ಬೊದ್ಕುಲಿ ಎಲ್ಲ ಸಿಕ್ಕಿಟ್ಟು... ಬೊದ್ಕು ಕಲ್ಸಿದ 'ಚಾಮೆವ್ವ' ಹೋಗುಟ್ಟು...!
ಬಾನ್‌ಗೆ ಹೊಗೆ, ಭೂಮಿಗಾಗುಟ್ಟು ಗೊಬ್ಬರ, ಬೇಡಾಂತೇಳಿಟ್ಟು ಆಡಂಬರ..!
ಈ ಮಸಣಾದ ಬೊದ್ಕು 'ಮೆಷಿನ್'' ಆದ ಜೀವನದ ಎಡೆಲಿ...
ಚಾಮೆವ್ವ ತುಂಬ-ತುಂಬ ನೆಂಪಾದವೆ...!!!

- ಲೋಕೇಶ್ ಊರುಬೈಲು, ಕೊಯನಾಡು

# ಯೋಧಂಗೆ ಸಮರ್ಪಣೆ



ಭಾರತ ದೇಶ ಎಂದೂ ಮರಿಯದ
ಕೆಚ್ಚೆದೆ ಯೋಧ ನೀನಾಗ್|
ಕನ್ನಡಮ್ಮ ನ ಕೂಸಾಗ್
ಕೊಡಗ್‌ನ ಕಲಿಯೇ ನೀನಾಗ್ ||

ಭಾರತ ದೇಶದ ರಕ್ಷಣೆಗಾಗಿ
ದುಷ್ಟರ ಸದೆ ಬಡಿ ನೀ ಯೋಧ |
ಭಾರತೀಯರ ದೇಶಪ್ರೇಮನ
ಉಳ್ಸುವ ಧೀರ ನೀನಾಗ್ |
ಭಾರತೀಯ ಭವ್ಯ ಭವಿಷ್ಯನ
ಬೆಳ್ಗುವ ಶೂರ ನೀನಾಗ್ ||

ಪರಕೀಯರ ಹೆದ್‌ರಿಕೆ ಅಳ್ಸಿ |
ಧೈರ್ಯ ತುಂಬಿಕೆ ಬಾ ಯೋಧ
ಭಾರತ ಧ್ವಜನ ಎತ್ತಿ ಹಿಡಿವ
ವೀರ ಶಿರೋಮಣಿ ನೀನಾಗ್ |
ಭಾರತ ದೇಶಲಿ ಬಡವರ ಕಣ್ಣೀರ್
ಬರ್‍ಸುವ ವೀರ ನೀನಾಗ್
ಶಿಸ್ತ್‌ನ ಯೋಧ ನೀನಾಗ್ ||

- ಕಡ್ಲೇರ ತುಳಸಿ ಮೋಹನ್, ಬೆಟ್ಟಗೇರಿ

# ಕೊಡಗ್



ಕೊಡಗ್ ನಮ್ಮ ಪೂರ್ವ ಜಿಲ್ಲೆ
ಕಾವೇರಿ ತ್ರಿವೇಣಿ ಸಂಗಮ ಇರ್‌ದು ಇಲ್ಲೆ
ಪ್ರಕೃತಿ ಪೊರ್ಲ್‌ಲಿ ಮೆರ್‌ದ ಜಿಲ್ಲೆ
ಅದೇ ನಮ್ಮ ಕೊಡಗ್ ಜಿಲ್ಲೆ

ಕಾವೇರಿ ನಿಸರ್ಗಧಾಮ ಇರ್‌ದು ಇಲ್ಲೆ
ಹರಿಯುತುಟ್ಟು ಇಲ್ಲಿ ಚಿಕ್ಲಿ ಹೊಳೆ
ಹತ್ರಾನೇ ಉಟ್ಟು ದುಬಾರೆ
ಮನಸ್ಸೆಳೆವ ಆನೆ ಸವಾರಿ ಇರ್‌ದು ಇಲ್ಲೆ
ಅದೇ ನಮ್ಮ ಕೊಡಗ್ ಜಿಲ್ಲೆ

ದೇಶ ಸೇವೆ ಮಾಡಿ ಪ್ರಾಣ ತ್ಯಾಗ ಮಾಡ್ದ
ವೀರ ಸೇನಾನಿಗಳ ನಾಡ್ ಇದ್
ಇದೇ ನಮ್ಮ ಕೊಡ್ಗ್ ಜಿಲ್ಲೆ

ಬೆಳಿತಾವಳೋ ಇಲ್ಲಿ ಕಾಫಿ-ಏಲಕ್ಕಿ, ಕಿತ್ತ್‌ಳಿ
ಒಳ್ಳೆ ಮೆಣಸ್, ಭತ್ತ
ಒಟ್ಟಿಗೆ ಉಟ್ಟು ಶುಂಠಿ ಕೃಷಿ
ಒಮ್ಮೆ ನೋಡೋಕು ನೀವು ಮಳೆಗಾಲಲಿ
ಅಬ್ಬಿಫಾಲ್ಸ್, ಇರ್ಪು, ಮಲ್ಲಳ್ಳಿ, ಕರಿಕೆನ
ಜಲಪಾತಗ ಹಾಲ್ ನೊರೆನಂಗೆ ಬೆಳ್ಳಂಗೆ ಉಕ್ಕಿದೆ

ಪೊರ್ಲ್‌ನ ಸೂರ್ಯಾಸ್ತಮಾನನ ಸವಿಯಕೆ
ಸಂಜೆನ ಬೀಸುವ ತಂಪುಗಾಳಿ
ಬೇಕೂತಾದರೆ ಹೋಕು ರಾಜಸೀಟಿಗೆ
ಇದೇ ನಮ್ಮ ಕೊಡಗ್ ಜಿಲ್ಲೆ.

- ಆಶಾ ಧರ್ಮಪಾಲ ಪ್ರಭು, ಮಡಿಕೇರಿ

# ಹೊತ್ತಾರೆನ ಮಡಿಕೇರಿ



ಚುಮು ಚುಮು ಚಳಿಯ
ಆ ಹೊತ್ತಾರೆನ ಕಾಲ
ಮಂಜಿನ ನಗರಿಯ ಮ್ಯಾಲೆಲ್ಲ
ಹೊಯ್ದುಟ್ಟು ತಿಳಿಬಣ್ಣದ ಹಾಲ |

ಮೆತ್ತ ಮೆತ್ತನೆ ಕಾಣುವ
ದೂರದ ಬೆಟ್ಟದ ನಡುಲಿ
ರವಿಕಿರಣಗಳ ಚಾಚಿತ್ತ್ |
ತಂಪಾದ ಗಾಳಿ ಮನ್ಸಿಗೆ ಮುದ ಕೊಡ್ಕನ
ಹಕ್ಕಿಗಳಿಂಚರ ಚಿಲಿಪಿಲಿ ನಾದ
ಪ್ರಕೃತಿಗೆ ಸುಪ್ರಭಾತನ ಹಾಡ್‌ದಂಗಿತ್ |

ಸೀರೆ ನೆರಿನಂಗೆ ಕಾಣುವ
ಹಸ್‌ರ್ ಮರಗಳ ಸಾಲ್
ಮಂಜಿನ ನಗರಿಯ ಮೋದೋಳಿಗೆ
ಕಂಬಿ ಸೀರೆನ ಉಡ್‌ಸಿದಂಗಿತ್ತ್ |
ಅಲ್ಲಲ್ಲಿ ಹೊಳೆ ತೋಡ್‌ನ ನೀರ ಸದ್ದ್
ಬಿಸಿಲ ಧಗೆನ ತಂಪ್ ಮಾಡಿಕೆ
ಕಾಯ್ತ ಇದ್ದಂಗೆ ಕಾಣ್‌ತಾ ಇತ್ತ್ |

ನಡು ನಡುಲಿ ಕಾಣುವ
ಅಲ್ಲಲ್ಲಿ ಹಾದ್‌ಹೋದ ದಾರಿಗ
ಊರ್‌ಂದ ಊರ್‌ಗೆ ನಂಟ್ ಬೆಳ್‌ಸಿತ್ತ್ |
ಇವೆಲ್ಲದರ ಮಧ್ಯಲಿ ಎತ್ತರೆತ್ತರಕೆ
ನಮ್ಮಂತವು ಕಟ್ಟಿಸಿದ ಬಣ್ಣ ಬಣ್ಣದ ಮನೆ, ಕಟ್ಟಡಗ
ಜಾಗ ಇಲ್ಲದೆ ಒಂದರ ಮೇಲೊಂದು ನಿತ್ತಂಗಿತ್ತ್ |

ಹಿಂಗಿತ್ತ್ ನಾನ್ ಅಂದೊಂದ್ ದಿನ
ಮಡಿಕೇರಿನ ತುಂಬ ಎತ್ತರಂದ ನೋಡ್ದ
ರಮಣೀಯ ನೋಟ, ಜಗತ್ತ್‌ನ ವಿಸ್ಮಯ |

- ಕಡ್ಲೇರ ಜಯಲಕ್ಷ್ಮಿ ಮೋಹನ್‌ಕುಮಾರ್, ಬೆಟ್ಟಗೇರಿ

# ಮಡಿಕೇರಿ ದಸರ



ಎಲ್ಲೂ ಇಲ್ಲೆ ಇಂತ ಪೊರ್ಲು
ಬನ್ನಿ ನೋಡಿ ದಸರ
ಹಗ್‌ಕ್ಕಿಂತ ಇರ್ಳೆ ಪೊರ್ಲು
ನಮ್ಮ ನಾಡ್ ದಸರ
ದಶಮಂಟಪ ಜಾತ್ರೆ ಇದ್
ವರುಷಕ್ಕೊಂದೇ ಉತ್ಸವ
ಹತ್ತ್ ಅಲ್ಲ, ಹನ್ನೊಂದುಟ್ಟು
ಮಂಟಪಗಳ ವೈಭವ
ನೂರ್ ಸೂರ್ಯ ಬೆಳಗುವಂಗೆ
ಮಡಿಕೇರಿ ಬೆಳ್ಗಿದೆ
ಪುರಾಣದ ಪುಣ್ಯ ಕಥೆ
ತೇರ್‌ಗಳ್‌ಲಿ ಕಂಡದೆ
ರಾಜಬೀದಿ ಬೀದಿಲೆಲ್ಲ
ಜನಸಾಗರ ಹರದೆ
ಬಂಗಾರದ ರಂಗ್ ನಂಗೆ
ಕಟ್ಟಡೆಲ್ಲ ಹೊಳ್ದದೆ
ಮಂಜ್‌ನ ಕೋಟೆಯೊಳಗೆ
ಮಡಿಕೇರಿ ಕೊಣ್ದದೆ
ವ್ಯಾಪಾರಕೆ ಬಂದ ಜನ
ಪೀಪಿ ಊದಿ ಕರ್ದವೆ
ತರ ತರದ ಮಾಲ್‌ಗೆಲ್ಲ
ದಾರಿ ಕರೆಲಿ ಇದ್ದವೆ
ಅಲ್ಲಿ ನುಗ್ಗಿ ಇಲ್ಲಿ ನಡ್ದ್
ಕೆಲವ್ ತಪ್ಪಿ ಹೋದವೆ
ಇಲ್ಲಿ ಕುದ್ದ್ ಅಲ್ಲಿ ಎದ್ದ್
ತೂಕಡಿಸಿ ಬಿದ್ದವೆ
ಮದ್ದ್ ಕುಡ್ದ ಮೀನ್‌ನಂಗೆ
ತೇಲಿಕಂಡ್ ನಡ್ದವೆ
ಇನ್ನೊಮ್ಮೆ ಬನ್ನಂತೇಳಿ
ಊರ್‌ಕಡೆ ಹೊರ್ಟವೆ.

- ಬಾಲಿಯಂಡ ಜೋಯಪ್ಪ, ಮದೆ

# ಸಮರ ವೀರ



ತ್ಯಾಗ ಶೌರ್‍ಯದ, ದಿವ್ಯ ಚೇತನ ಮರೆ ಆತ್ ಅರೆಕ್ಷಣಲಿ
ನೀಲಿ ಬಾನ್‌ಲಿ ಸಿಡಿಲ್ ಮಿಂಚಿ ಹೋಳಿವ ತೆರಲಿ
ಅಮರರಾದೋ ಶೂರಖಲಿ ಅಪ್ಪಯ್ಯಗೌಡರ್
ಕೊಡಗ್‌ನ ಪ್ರತಿಜನರ ಮನಮನೆಲಿ

ವೀರಖಲಿತನ ಹೆಚ್ಚಿಸಿದ ದಿವ್ಯಶಕ್ತಿಯ ಇಂಧನ
ನಾಡ್‌ನ ಮಣ್ಣ್‌ನ ಘನತೆನ ಉಳಿಸಿ ಬೆಳೆಸಿದೋ ಆ ದಿನ
ಸ್ವತಂತ್ರ ಮಂತ್ರನ ಸಾರಿಹೇಳ್‌ದ ಅಪ್ಪಯ್ಯಗೌಡರ
ಹೆಸ್‌ರ್ ಅಳಿಯದಿರಲಿ ದೇಶದೆಲ್ಲೆಡೆ ನಿರಂತರ

ಕೊಡಗ್‌ನ ವೀರಪುತ್ರನೇ ನಿಮಗಿದೋ ಪುಷ್ಪಾಂಜಲಿ
ನಿಮ್ಮ ತ್ಯಾಗಬಲಿದಾನಕ್ಕೆ ಕಣ್ಣ್‌ಸುರಿಸಿತ್
ಅಂದ್ ಹೆಮ್ಮೆಯ ಭಾಷ್ಪಾಂಜಲಿ
ದೇಶದೆಲ್ಲೆಡೆ ನಿಮ್ಮ ಶೌರ್‍ಯದ ರಕ್ತ ಚಿಮ್ಮಲಿ

ಕೊಡಗ್‌ನ ಮಡಿಕೇರಿಲಿರುವ ನಿನ್ನ ಆ ನೆನಪಿನ ಪುತ್ಥಳಿ
ತುಂಬಲಿ ಧೈರ್‍ಯಶೌರ್‍ಯದ ಕೆಚ್ಚೆದೆಯ
ಸದಾ ಈ ನಾಡ್‌ನ ಮಕ್ಕಳಿಗೆ
ಸ್ವಾತಂತ್ರ್ಯ ಉಳಿಸುವ ಸಮರಲಿ.

- ಪುದಿಯನೆರವನ ರೇವತಿ ರಮೇಶ, ಮಡಿಕೇರಿ

ಕುಂಬಾರ ಭಾಷೆ ಕವನ

# ಮಾನವ



ಕೆಲ್ಲಡಿಲಿ ಕಂಡ ಆ ಬೆಚ್ಚಿ
ಗೆಡ್ಡೆ ಗೆಣಸ್‌ಲಿದ್ದ ತಿನಿಸ್
ಆ ಬೆಚ್ಚಿಲಿ ಬೆಂದ ಆ
ಮಾಸದ ರಸ ಇಂದಿಲಾ
ನೆನಪಾಯಿದ್ ಉಳಿದಿತ್.

ಕಾಡ್ ಮೇಡೆಲ್ಲವ ಅಲೆದ್‌ದ್
ಮಳೆ ಬಿಸಿಲೀಂದೇಳದೆ
ಬೆಟ್ಟವ ಗುಡ್ಡ ಮುಳ್ಳುಗಳ್
ಹತ್ತಿದೆ ಮಂಗ್ಣಾದ ಮನುಷ್ಯ
ರಾದ ಆ ದಿನ.

ಆಗ ಕಟ್ಟ್‌ದ್ ಸಣ್ಣಗುಡಿಸ್‌ಲ್
ಈಗಣ ದೊಡ್ಡ ಬಂಗಲೆಗಳ
ಎಲ್ಲವೂ ತನ್ನದೇಂದ್
ಬಯಸ್‌ವ ಇತಿಮಿತಿ
ಇಲ್ಲದ ಆ ಮಾತ್.

ಬೇಕ್ ಬೇಡಿಕೆಗಳ ಮರೆತ್
ತಿಂದ್ ತೇಗ್‌ತೊ ಈ ಜನರ್
ಇನ್ನೊಬ್ಬರ್ ಬಯಸ್‌ದೊದ
ಹಾಳ್ ಮಾಡ್‌ತೊ ಈ ಬದ್‌ಕ್
ಆರಿ ಬೇಕ್?

- ಹೆಚ್.ವಿ. ಸುನಿತಾ ವಿಶ್ವನಾಥ್, ಬೆಟ್ಟಗೇರಿ

ಬ್ಯಾರಿ ಭಾಷೆ ಕವನ

# ಪೊಂಜಿರಿ

ಇದ್ ಚಂದತ್ತೊ ರಾಯ, ಮಡಿಕೇರಿ
ಇದ್ ಮಜಿ ನೊರಞೊ ಮಂಜರಿ
ಊಡೆ ಮಲೆಗಾಲ ಎಪ್ಪೊಲುಂ ಪಿರಿ ಪಿರಿ
ಯಡೆ ಪೊಡೆ ಉಂಡೋರು ಬೆಳ್ಕಿರಿ

ನೆಲ್ಲ್ ಕಾಫಿ ಪಿನ್ನೆ ಯಲ್ತರಿ
ಈ ರಾಯತಜಲೊ ಚಾಕ್‌ರಿ
ಊಡೆ ವರ್ಷತ್‌ಲಾವುಡೊರು ಪುದಿಯರಿ
ಅಂಡ್ ರೈತರೊ ಮೊಗತ್ತಲ್ ಪೊಂಜಿರಿ
ಇಲ್ಲೆ ಜಾತಿ ಪೆನಕ್ಕ್‌ಡೆ ಕಿರಿಕಿರಿ

ಊಡೆ ಎಪ್ಪೊಲುಂ ನಲ್ಲೆ ಮೈತಿರಿ
ಊಡ್ರೊ ಧೈರ್ಯ ಸಾಹಸ ಮಾದರಿ
ಇಜಿ ದೇಶತ್ತೊ ಕಾವಲು ಮಿಲಿಟರಿ
ಬಾರಿ ಚಂದತ್ತೊ ಪೊಲೆ ಉಂಡು ಕಾವೇರಿ
ನಾಡ್ ಕನ್ನಡ ರಾಜ್ಯತ್ತೊ ಸುಂದರಿ
ಇದ್ ಚಂದತ್ತೊ ರಾಯ ಮಡಿಕೇರಿ

- ಅಬ್ದುಲ್ಲಾ, ಮಡಿಕೇರಿ

# ಚಂದತ್ತೋ ಕೊಡಗ್



ಕೌಫಿಡೊ ತೋಟತ್ತೊ ಕೊಡಗ್ ಇದ್
ಬಾರೀ ಚಂದತ್ತೊ ರಾಯ ಇದ್
ಚುತ್ತಿಟ್ಟ್ ನೋಕೊಗು ಸುಲಭ ಇದ್
ಎಂದೊರು ಸೋಕುಡೊ ಜಿಲ್ಲೆ ಇದ್

ಚಿತ್ತ್‌ಪುಲಿ, ಬಾಲೆ ಯಾಲಕ್ಕಿ
ನೆಲ್ಲ್‌ಡೆ ಬೆಲೆಯಿಡೊ ಭೂಮಿ ಇದ್
ಪಡೆಲ್ ಪೊರುದೊಗು ಯೋಧಮಾರೆ
ಯಾರ ಕೊಡ್ತೊರು ಜಿಲ್ಲೆಯಿದ್ || ಕಾಫಿಡೊ||

ಅಬ್ಬೀಪಾಲ್ಸ್‌ಡೊ ಆ ತನ್ನಿ
ಬಾರಿ ವಯರತ್ತೊ ಇಲ್ಲೊರೆತನ್ನಿ
ಬೂಲೂಡೊ ಧಾರೆಡೊ ನೋಕುಂಬೊ
ಮನಸ್‌ಗ್ ಎಂದೊರು ಸಂದೋಲ

ರಾಜಾಸೀಟ್‌ಗ್ ಪೋವೋನೆ
ರಂಗ್‌ಡೊ ಪೂಂಜಲೆ ನೋಕೋನೆ
ಮಾಂದಲ್ ಪಟ್ಟಿಯುಂ ಅಂಜನೆಮೆ
ನೋಕುಡೊ ಪೋಲ್ತೊರು ಕುಗ್ರಾಮ ||ಕಾಫಿಡೋ||

ನಿಸರ್ಗಧಾಮೊಂ ಹಾರಂಗಿ
ಚಿಕ್ಲಿ ಪೊಲೆಯುಂ ಪರಿಸರವುಂ
ದುಬಾರೆ ಕಾಡುಂ ಆನೆ ಸವಾರಿ
ನೋಕುಂಬೊ ಎಂದೊರು ರಾಹತ್ತ್

ಎಪ್ಪೊಂ ಕೊಡಗ್‌ಲ್ ಸೆಖೆ ಇಲ್ಲೆ
ಮಲೆಗಾಲತ್ತುಂ ಬೆಡಿಯಿಲ್ಲೆ
ಜಾತಿ ಧರ್ಮತ್ತೊ ಪಗೆ ಇಲ್ಲೆ
ಒರ್‌ಮತ್ತ್‌ಗೆಂದುಂ ಫಿಕ್‌ರಿಲ್ಲೆ.

- ಎಂ.ಇ. ಮಹಮದ್, ಮಡಿಕೇರಿ

ತುಳು ಭಾಷೆ ಕವನ

# ಎಂಕುಲ್ನ ನೆಲ



ಜಗತ್ತ ಉದ್ಯೊಗುಲ ನೂತ್ತಾಜಿ ದೇಶೊಲು
ಹಿರಿಯಾಯ್ನ ಕಿರಿಯಾಯ್ನ ಬಾಗಿದ್‌ನ ಬಳ್‌ಕ್‌ದ್‌ನ
ಜಿಂಜಾಬಗೆತ್ತ, ನೆಲತ್ತ ಜಲತ್ತ ಉಳಾಯಿತ್ತಿನ
ಭಾರತವೊಂಜಿ ಜಿಂಜ ಸಂಸ್ಕೃತಿತ್ತ ದೇಶ

ಜಿಂಜಾದಿತ್ತಿನ ಧರ್ಮದ ಕಪ್ಪುದಗುಲು ಬೊಳ್ಳನೆತ್ತಗುಲು
ತೋಡೆರ್ ನಾಗೆರ್ ಧೀರೆರ್ ಶೂರೆರ್ನಕುಲು
ಕುರ್ದತಗುಲು ಉದ್ದಾಯಿನಗುಲು ಜಿಂಜ ಜನತ
ಬಂಜಿಡಿತ್ತಿನ ಜೋಕುಳ ಸಾಂಕುನ ಎಂಕುಲ ಭಾರತಪ್ಪೆ

ದೇಶದ ಭಾಷೆ, ನಾಡ್‌ದ ಭಾಷೆ, ಪಾತೆರ್ನ ಭಾಷೆ
ಸಾವಿರ ನಾಡ್‌ದ ಜಿಂಜ ಭಾಷೆದ ಭಾರತೊಡು
ಅರ್ಥವೊಂಜೆ, ಪಾತೆರುನ ಭಾಷೆ ಬೇತೆ, ಭಾವನೆ ಬೇತೆ
ಬಗೆ ಬಗೆತ ಆಚಾರೊಡು ಜಿಂಜೆ ಪನ್ಪುನ ಭಾರತಪ್ಪೆ

ದ್ವೇಷ ಬುಡ್ದು ನಾಡ್ ಕಟ್ಟುನ
ಭಾವನೆದ ಪಲಯೆ ಮೆರ್ಗ್ ಪನ್ಪುನ ಭಾವನೆಡ್
ಭಿನ್ನೆರ್‌ನ್ ಲೆತ್ತುದು ನಂಬಿಕೆನ್ ದಿಡ್ದ್
ಮಾತೆರೆಗುಲ ಉನ್ಪು ನೀರ್‌ಕೊರ್ಪುನ ಎಂಕಲ ಜಾಗೆ

ಭಾರತ ಪನ್ಪುನ ದೇಶ ಮಾತ್ರತ್ತ್ ದೇವಿನ ಗುಡಿ
ಬಗೆಬಗೆತ ಸಂಸ್ಕೃತಿತ ಅಪ್ಪೆನ ಎಂಕುಲ ನೆಲ
ನಡುತ್ತನಾಡ್ ಇಪ್ಪಡ್, ಗಡಿತ ನಾಡ್ ಇಪ್ಪಡ್
ಶಾಂತಿದ ಪ್ರೀತಿದ ನಂದತ್ತೆ ಇಪ್ಪುನ ಎಂಕುಲ ನೆಲ

- ಬಿ.ಎಸ್. ಸತೀಶ್ ಸೋಮಪ್ಪ, ನಾಕೂರು

ಮರಾಠಿ ಭಾಷೆ ಕವನ

## ಅಮ್‌ಚಿ ಮಾಯ ಬಾಪ



ಜನಮ್ ದಿಲ್ಯಾಲ ಮಾಯಬಾಪ ದೇವಾಲಾ ಸಮಾ |
ಲೇಕ್ರಾಲೀ ಪುಡಚಾಂಗ್‌ಲ್ಯಾಸಾಠಿ ಕರತಾತ ಢಂಕೆ ಜಮಾ|
ಹೇ ದುನಿಯಾತ ಅಂತಾಚಿ ಲೇಕರಾಚ ಮೋಜಮಸ್ತಿ ರಾಮರಾಮಾ|
ವಾಡವಡೀಲಾಲಿ ಘರಾಸೂನ ಭೈರಘಾಲತ್ಯಾತೆಲೀ ಮಳತ್ ನಾಹೀ ಕ್ಷಮಾ|

ಥಾನಾಚ ದೂದ್ ದೇವೂನ ಪೋಸುನ ಪಾಳತ್ಯಾಲಿ ಆಈ|
ಧಾಕ್ಲಾಸೂಟೂನ ಡೋಳ್ಯಾತ ಡೋಳಾ ಥಿವುನ ಬಗತಿ ಆಈ|
ಕಿತ ಪೈಸೆ ದಿಲತರಭಿ ಮಿಳತನಾಹಿ ಬಾಪ ಆಣಿ ಮಾಯ |
ಪಡ್ಲತರ - ಉಟ್ಲತರ ಕಾಳಜೀನ ಬಗತ್ಯಾಲಿ ಪೋಟಾಚಿ ಮಾಯ|

ಆಈ ಪಹೇಲಾ ಗುರು ಹೋವುನ ಬೋಲಸ್ತಿ ಹಮಾಲಿ ಗೋಷ್ಠಿ|
ಹೆಣಗ-ಗಂಡಗ ಕೊಂಚತರಭೀ ಲೇಕುರಾವರಚ ಡೀವಾಚ ದಿಷ್ಠಿ|
ಹೌಹಾರತಿ ಲೋಕೂರಾಲಾ ಕಾತ್ರ ಆಲತರ ಪಡಸ - ಕಷ್ಠಿ|
ಲೋಕರಪಾರನ ತೆಂಚ,ಆ ಡೀವಸರ್‍ನ ಕರ್ತ್ತಿನಾಹಿ ಚಾಷ್ಠಿ|

ಕಷ್ಠ-ಸೂಖ- ದುಃಖಾ ಮಂದಿ ವಾಗಸ್ತಾತ ಲೋಕ್ರಾಲೀ|
ಎವಡ ಕಷ್ಠ ಗಿಳೂನ ಥೋರವಂಟ ಕರತಾತ ಪೋರಾಲಿ|
ವಯಸ್ಸಾಲಾ ಆಲ್ಯಾಲಿ ಲೇಕ್ರುವಾಳಾಲಿ ಕರತಾತ ಲಗೀನ |
ಬಗಲಾತ ಬಾಯಕೋ ಆಲತ್ರ ಮಾಯಬಾಪಾಲಾ ಬಗಲೇಚನದಿತಾ ಅಕೀನ|

ಪುಣ್ಣ ಕರಾವ್ ಮಾಈಚ ಪ್ರೇಮ ವಿಶ್ವಾ ಣೇಯಾಲಾ|
ಮಾಥಾರ ಜಾಲತಾವ್ ಬೀ ಬಗಾವ್ ಆಈ ಬಾಪಲಾ|
ತೆಂಚೆ ದೋಗಾ ಕಣ್ಣ ಮಿಳ್ಳಾಯ ದಮಾಲೀ ಜೀವ|
ಕೊಂಚ್ಯಾಲಿ ಭೀ ಸಮಯಾತ್ ಏಕ್ಕೂಚ ತರ ಅಸಾವ್ ಭಾವ|

- ಎಚ್. ಭೀಮರಾವ್ ವಾಷ್ಕರ್ (ಶಾಸ್ತ್ರಿ), ಮಡಿಕೇರಿ

ತೆಲುಗು ಭಾಷೆ ಕವನ

# ಮಾ ಊರು.... ಮಾಮಾಟ !



ಮಾ ಊರಿಲೋ ಕೋಡಿ ಪುಂಜುಲು ಕೂತಪೆಟ್ಟವು...!
ಮಾ ಊರಿಲೋ ಕುಕ್ಕುಲು ಮೊರಗವು....!
ಮಾ ಊರಿಲೋ ಪಿಲ್ಲಿಲು ಎಲುಕಲನಿ ವೇಟಾಡವು...!
ಮಾ ಊರಿಲೋ ಚಿಲುಕ, ಗೋರಂಕ,
ಕೋವೆಲಲ ಪಾಟ ವಿನಿಪಿಂಚದು...!

ರಾತ್ರಂತಾ ಒಕ್ಕಟೇ ಸಂದಡಿ... ಪೊಗವಿಡುಸ್ತೂ ಪರುಗುಲು ತೀಸ್ತುನ್ನವಾಹನಾಲು..!
ಎಕ್ಕಡ ಚೂಸಿನಾ ಡಬ್ಬುಲು ಪಟ್ಟುಕುನಿ ತಿರುಗುತುನ್ನವಾಳು...!
ಮಧ್ಯಂ ದುಕಾಣಲಲೋ... ಮಧ್ಯಪಂಚಿ ಪೆಡುತುನ್ನ ಆಡವಾಳ್ಳು...!
ಮನುಷಲನಿ ಮನುಷಲೇ ವೇಟಾಡುತುನ್ನಾರು...!

ಆ ನಾಡು ಮನಗಾಂಧೀಗಾರು ಚೆಪ್ಪಿನ ಮಾಟಲನಿ... ಮನ ಆಡವಾಳ್ಳು ಸಾಧಿಂಚಾರು...
ಈ ನಾಡು ಒಕಮೆಟ್ಟು ಎಕ್ಕುವೇ ಪೊಂದಗಲಗಾರು ಸ್ವಾತಂತ್ರ್ಯಾನ್ನಿ, ಸ್ವೇಚ್ಛನಿ...
ಸೂರ್ಯಡು ಎಪ್ಪುಡು ಉದಯಿಸ್ತಾಡೋ ತೆಲಿಯದು...!
ಅಲಾಗೇ... ಎಪ್ಪುಡು ಅಸ್ತಮಿಸ್ತಾಡೋ ತೆಲಿಯದು...!
ಕೊಂಡಲ್ನಿ-ಕೋನಲ್ನಿ, ಅಡವುಲ್ನಿ-ನದುಲ್ನಿ ನಾಶನಂ ಚೇಸ್ತೂ...!
ಪ್ರತಿರೋಜೂ-ಪ್ರತಿಕ್ಷಣಂ ಸ್ವಾರ್ಥಂ ಪೆಂಚು ಕುಂಟುನ್ನಾಮು...!

ಅಂದುಕೇ... ಅಂದುಕೇ...
ಮಾ ಊರಿಲೋ ಕೋಡಿ ಪುಂಜುಲು ಕೂತಪೆಟ್ಟವು...!
ಸೂರ್ಯಡು ಅಸ್ತಮಿಂಚಿ ಮಳ್ಳಿ ಉದಯಿಸ್ತೇ ಕದಾ ಕೋಡಿ ಕೂತ ಅವಸರಂ...
ರಾತ್ರಿಯ್ಯಿಂದನಿ ಮನುಷಲು ನಿದ್ರ ಪೋತೇ ಕದಾ...
ಸೂರ್ಯುನಿಕೀ ಪನಿ... ಕೋಡಿಪುಂಜುಲಕೀ ಪನಿ...!
ಮಾ ಉರಿಲೋ ಕುಕ್ಕುಲು ಮೊರಗವು....!
ರಾತ್ರಂತಾ ಪೋಲಿಸುಲ ಗಸ್ತೀ... ಆಸುಪತ್ರುಲಲೋ ಕ್ಷತಗಾತ್ರುಲು...

ಅಂದುಕೇ... ಅಂದುಕೇ ಕುಕ್ಕುಲು ಮೊರಗವು.. ಮೊರಗಡಂ ಮರಿಚಿ ಪೋಯಾವಿ
ಮಾ ಊರಿಲೋ ಪಿಲ್ಲಿಲು ಎಲುಕಲನಿ ವೇಟಾಡವು...!
ಮನುಷುಲೇ ಎಕ್ಕಡ ಚೂಸಿನಾ ಏದೋಒಕ ಕುಟ್ರತೋ ಪನಿಲೋವುಂಟೇ...
ಪಿಲ್ಲಿಲು ವೇಟ ಮರಿಚಿ ನಿದ್ರ ಪೋತುನ್ನಾವಿ...!
ಮನುಷುಲೇ ಪಂದಿ ಕೊಕ್ಕಲೈ ಎಕ್ಕಡಕ್ಕಡೋ ನಿಶ್ಚಯಂ ತೋ ತಿರುಗುತುನ್ನಾರು

ಮಾ ಉರಿಲೋ ಚಿಲುಕ-ಗೋರಂಕ-ಕೋವೆಲಲ ಪಾಟ ವಿನಿಪಿಂಚದು...!
ವಿಜ್ಞಾನಂ ಪ್ರಗತಿ ಪೇರುತೋ, ಟಿ.ವಿ. ಅಂತರ್ಜಾಲಲಕಿ- ಮೊಬೈಲ್ ಫೋನ್ಲಕಿ...
ಗಗನಾನಿಕಿ ಪೆರಿಗಿನ ಟವರ್ಲು... ಕೇಬಲ್ಲುಲು, ತರಂಗಾಲು....!
ಇಕ... ಆ ಚಿಲುಕಲು, ಗೋರಂಕಲು, ಕೋವೆಲಲು ಪಾಟಲುಪಾಡಡಂ ಎಲಾ...
ಬ್ರದುಕಡಮೇ ದುಸ್ತರಂ.... ದುರ್ಭರಂ ಅಯ್ಯಂದಿ....!

- ಸಬಲಂ ಭೋಜಣ್ಣ ರೆಡ್ಡಿ, ಕುಶಾಲನಗರ

ಕೊಂಕಣಿ ಭಾಷೆ ಕವನ

# ಚುಟುಕಗಳು



ಅಮ್ಮ್ಯಾಚ್ಯಾ ಗೊಟ್ಯಾಂತ್ ಬಾಂದುನ್ ಘಾಲ್ಯಾ ಗಾಯ್
ದೂದ್ ಕಾಡ್ಚ್ಯಾ ಪೊಯ್ಲಿ ಉದಾಕ್ ತುಂ ಲಾಯ್
ವಿಸಾರ್ನಕಾ ಬಾಂಧುಂಕ್ ತಾಚ್ಯೆ ಪಾಯ್ಂ
ಉಪ್ರಾಂತ್ ಪಿಂಯೇ ತುಂ ಘರಂ ಘರಂ ಚಾಯ್

ತಾಣಿಂ ದೊಗಾನಿಂ ದಾರ್‌ಲ್ಲೆಂ ಎಕಾಮೆಕಾ ಹಾತ್
ತಾಕಾ ಕಾಜಾರ್ ಜಾಂವ್ನ್ ಜಾಲ್ಲೆಂ ದೀಸ್ ಸಾತ್
ಅದಾಳ್ಳೆಲೆಂ ಬೋಟ್, ಉಸಾಳ್ಳಿ ಕಾತ್
ಜಾವ್ನ್ ಅಸಾ ಅಜ್ಜಿಯೆನ್ ಪೊಸ್‌ಲ್ಲಿ ನಾತ್

ತರ್ನಾಟೆಂ ಸಾಂಗತಾ ಅಸ್ತಾನ ನಾ ಅಮ್ಮ್ಯಾಂ ಬಿಯೆಂ
ಪುಣ್ ತರ್ನಾಂಟ್ಯಾಂಕ್ ನಾ ಸಂಸಾರಾಚ್ಯೆಂ ಬಿಯೆಂ
ಜಿಣ್ಯೆಚೆಂ ಜವಾಬ್ದಾರ್ ತರ್ನಾಟ್ಯಾಂಕ್ ಜಾಯ್
ಜಿಣ್ಯೆಚಿಂ ರೀತ್ ಶಿಕಾಯ್ ತುಜ್ಯಾ ಭುಗ್ಯಾಂಕ್ ಮಾಂಯ್.

- ಚಾರ್ಲ್ಸ್ ಡಿಸೋಜ, ವಿರಾಜಪೇಟೆ

ಮಕ್ಕಳ ಕವನ

# ಮಡಿಕೇರಿ ದಸರಾ



ಅಂತು ಇಂತು ಬಂತು,
ಮಡಿಕೇರಿ ದಸರಾ ...

ಜಗ ಮಗಿಸುವ ಬಣ್ಣದ ಚಿತ್ತಾರಾ,
ಅದನ್ನು ನೋಡಲು ನನಗೆ ಕಾತುರ ...

ಎಲ್ಲೆಲ್ಲೂ ರಾಕ್ಷಸರ ಚೀರಾಟ,
ಅವರ ವಿರುದ್ಧ ದೇವತೆಗಳ ಹೋರಾಟ...

ನಗರ ತುಂಬಾ ನಕ್ಕು ನಲಿಯುವ ಜನ ಸಾಗರ,
ಅಯ್ಯೋ ಬೇಗ ಮುಗಿಯಿತಲ್ಲಾ
ದಸರಾ ಎಂದು ನನಗೆ ಬೇಸರ.

- ವಿನೀತ್ ಲೋಬೋ, ಮಡಿಕೇರಿ

# ಅನ್ನದಾತ

ಓ! ರೈತ ಬಾಂಧವರೇ
ನಿಮಗಿದೋ ವಂದನೆ
ಹಸಿದ ಹೊಟ್ಟೆಗೆ ಅನ್ನ ನೀಡಿ
ಸಾಕಿ ಸಲಹುವ ಓ!ರೈತ ಬಾಂಧವರೇ...
ನೀವಿಲ್ಲದೆ ನಾವಿಲ್ಲ.
ನೀವೇ ನಮಗೆಲ್ಲ.

ಬೆವರು ಸುರಿಸಿ ಶ್ರಮ ವಹಿಸಿ
ನೀರು ಹರಿಸಿ, ಗದ್ದೆ ಹೊಲಕ್ಕೆ
ದುಡಿದು ದಣಿದು ಪೈರು ಚಿಗುರಿಸಿ
ತೆನೆ ಗೊನೆ ಬರುವ ತನಕ
ಬೇಸರದೇ ಕಾದು, ಕಾಳು ತುಂಬುವ
ಓ! ಮಣ್ಣಿನ ಮಕ್ಕಳೇ
ನಿಮಗಿದೋ ವಂದನೆ.

- ಚೇತನ್ ಕೆ.ಸಿ., ಕೊಡ್ಲಿಪೇಟೆ

# ದಸರಾ



ವರುಷಕೆ ಒಮ್ಮೆ ಬರುವ ಮಡಿಕೇರಿ ದಸರಾ
ವರುಷಕೆ ಒಮ್ಮೆ ಬರುವ ಮಡಿಕೇರಿ ದಸರಾ
ನಮಗೆ ಹರುಷ ತರುವ ಮಡಿಕೇರಿ ದಸರಾ,

ಮಂಜಿನ ನಗರಿಯ ಐತಿಹಾಸಿಕ ದಸರಾ
ಮಂಜಿನ ನಗರಿಯ ಐತಿಹಾಸಿಕ ದಸರಾ
ಅಂದು ನಡೆಯುವುದು ದೃಶ್ಯ ವೈಭವ,

ಇರುಳಲಿ ನಡೆಯುವ ಮಡಿಕೇರಿ ದಸರಾ
ಬಾನಿಂದ ಭೂಮಿಗೆ ಇಳಿದು ಬರುವ
ಸುರ ಅಸುರರ ವೈಭವ,

ಮಂಜಿನ ಮರೆಯಿಂದ ಇಣುಕುವ ಬೆಳಕಿನ ವೈಭವ,
ಸ್ವರ್ಗವ ಸೃಷ್ಟಿಸುವ ಕಣ್ಣಿನ ತಣಿಸುವ
ಕರಗಗಳ ಕುಣಿತ
ಇದೇ ನೋಡಿ ಮಡಿಕೇರಿ ದಸರಾ,

ದುಷ್ಟರ ಸಂಹಾರ ಶಿಷ್ಟರ ರಕ್ಷಿಸುವ
ದೇವ ದೇವತೆಯರ ನಾನಾ ಅವತಾರ
ಇದೇ ನೋಡಿ ಮಡಿಕೇರಿ ದಸರಾ,

ಪ್ರತಿ ವರುಷ ಬರುತಲಿರಲಿ
ಹರುಷತರುವ ಮಡಿಕೇರಿ ದಸರಾ.

- ಅಭಿಜ್ಞ ಆರ್. ಕೆದಿಲಾಯ, ಗೋಣಿಕೊಪ್ಪ

# ನನ್ನ ಸೇನಾನಿಗಳು

ಕೋವಿ ಹಿಡಿದು
ಜೀವ ಬಿಗಿದು
ಕರವ ಮುಗಿದು
ಶರಣು ಎಂದು ಹೋರಾಡುವರು ನಮ್ಮ ಸೇನಾನಿಗಳು

ಶತ್ರುವನ್ನು ದೂರ ಅಟ್ಟಿ
ಸೇವೆಯನ್ನು ಮನಕ್ಕೆ ಕಟ್ಟಿ
ದೇಶ ಸೇವೆಯನ್ನು
ಈಶ ಸೇವೆಯು ಎಂದು ಹೋರಾಡುವರು ನಮ್ಮ ಸೇನಾನಿಗಳು

ಬಿಸಿಲು ಮಳೆಗೂ ಮರುಗದೆ
ಶತ್ರು ಧಾಳಿಗೂ ಅಂಜದೆ
ಶತ್ರು ತಲೆಯ ತುಂಡರಿಸಿ
ಕಾಳಿ ಮಾತೆಗೆ ಅರ್ಪಿಸಿ ಹೋರಾಡುವರು
ನಮ್ಮ ಸೇನಾನಿಗಳು

ಮಕ್ಕಳನ್ನು ಹೆತ್ತು ಹೊತ್ತು
ಸಾಕಿ ಸಲಹಿದ ತಂದೆ-ತಾಯಿಗಳು
ದೇಶ ಸೇವೆಯಲ್ಲಿ ಪ್ರಾಣ ತೆತ್ತರು
ನಮ್ಮ ಸೇನಾನಿಗಳು

ಸರ್ಕಾರದಿಂದ ಒದಗಿ ಬಂತು ಪರಿಹಾರಧನ
ಕೊನೆಗೂ ಕೂಡ ಸಿಗಲಿಲ್ಲ ಪರಿಹಾರ ಧನ
ಭ್ರಷ್ಟರ ಜೇಬು ತುಂಬಿತು ಆ ಹಣ
ಭ್ರಷ್ಟರಾದರು ಅಧಿಕಾರಿಗಳು, ಅಮರರಾದರು ನಮ್ಮ ಸೇನಾನಿಗಳು.

- ಡಯಾನ ಆಂಟನಿ, ಮಡಿಕೇರಿ

*English Poem*

# Rain of Coorg



Pitter Patter drops of rain
Made my Coorg really a heaven
Shower - shower once again
Stop our dear farmer's pain

Mist covered all the hill
River Cauvery somewhat full
All of us in greatest chill
With a wanted pretty thrill

Crystal clear rain drops
Falling from the blue sky
All around greenly crops
Cool beauty you can't buy

I enjoy the rain of Coorg
Silky milky hail stone
Walking with cap and bag
Singing song all alone

**- Shreeja Dayananda K., Madikeri**

# My Repentance



An arrow struck my heart,
It was wonderful,
It made me think some what,
and it was beautiful.

It seemed like a world of bliss,
fully shaped,
But what I didn't see was this,
it was shadowly draped.

It was the sweetest thing,
Ah ! love,
It was truly fascinating,
dazzling like a treasure trove,

Suddenly the world was rendered apart,
And I was thrown broken heart,
It was truly horrible,
and no longer adorable.

Thus ended my past,
but even now it lasts,
and I now realise,
Love is full of worry,

And hence,
you don't get another chance,
to say sorry.

**- Muthanna B.D., Pollibetta**

# Rain

Rain rain welcome rain,
Pour & pouns clean the drain.

Playing in the rain
Getting wet & catching cold
Staying away from school,
Seeing the doctor to get well
Taking pricks to get back school
Sleeping cozily at home.

In the rainy season,
The farmer ploughs the field
An dreams a good yield.

The mist starts coming
and cover everything.
We cannot see anything
But only the milky mist
Birds fly without rest
and reach their nest.

**- Omkar Karthikeyan M.S., Virajpet**

# My Nation



My nation is fine
Our peoples are shine
Our forests are green
Our oceans are queen.

East and west
Look like hands
North and south
Nothing but legs and head.

Northern part of my nation
Covered by full of plains
Southern part of our nation
Covered by costal and forest.

Our animal is strongest tiger
Our bird is beautiful peacock
Our flower is biggest lotus
Our flag is colourful with circul.

**- Inchara M.S., Madikeri**

# Green Land



Oh! my beautiful Kodagu,
You are green in colour.
Such a wonderful colour you have!
My birth place is Kodagu.
You are my prestige.
I will save my mother land.
It's my great duty.
I never forget you,
You looking so pretty.
You are rich in colour,
Trees, plants, creepers, rivers,
These are yours arrangements,
You are rich in nature,
I always respect you,
I love you,
I like you,
Hats off you! green land. Hats off you.

**- Krutajna Besur, Kodlipet**

# सूबह की रोश्नी



सूवह होते है, सूरज कीरण आता है
आधंकार चले जातो है, रोश्न चारों तरफ होतो है !
यह कहते हूए आज्ञान को छोडना
ज्ञान की तरफ मोडना !

मौसम बडी बडी है, रोज सवेरा पक्षिका गान मधूर है !
नये स्वर में उनका मधूर गान
कुछ कहते हुए जो उनके मन
हम भी उठें है, हम भी करते है काम
तुम भी उठो, तुम करो अपना कर्म ।

पौधे होते है, फल देते है ज्यादा
उनको संरक्षण करते हुए देना है मर्यादा
हमे करना है जगंल पेडो की रक्षा
वही पेड करते है, हमारी परिसर की रक्षा
वही कहते हुए, हम होते है जन कल्याण के ।
तुम भी करो लोक कल्याण ।

**- M.E. Monoj, Madikeri**

# ಕಾವ್ಯ ಲಹರಿಯಲ್ಲಿ...

**ಎ.ಹೆಚ್. ಸತೀಶ್‌ಕುಮಾರ್**
ಅರುಣ ಪದವಿ ಪೂರ್ವ ಕಾಲೇಜು, ಚೇರಂಬಾಣೆ
ಮೊ : 9480085224

**ತೆನ್ನೀರ ರಾಧ ಪೊನ್ನಪ್ಪ**
8ನೇ ಬ್ಲಾಕ್, ಕಾನ್ವೆಂಟ್ ಜಂಕ್ಷನ್, ಮಡಿಕೇರಿ
ಮೊ : 9739939931

**ಕುಡೆಕಲ್ ಸಂತೋಷ್**
ಹೆಮ್ಮೆತ್ತಾಳು ಗ್ರಾಮ, ಮಕ್ಕಂದೂರು
ಮೊ: 9972538584

**ಹೇಮಲತಾ ಪೂರ್ಣಪ್ರಕಾಶ್**
C/o ಅಪ್ಪುಕುಟ್ಟನ್ ಕಾಂಪೌಂಡ್, ಮನೆ ನಂ. 23/84/3, ಮೇಲಿನ ಗೌಡ ಸಮಾಜ ಹಿಂಭಾಗ, ಕನ್ನಂಡಬಾಣೆ ರಸ್ತೆ, ಮಡಿಕೇರಿ
ಮೊ : 9945966749

**ಅಕ್ಷತಾ ಶೆಟ್ಟಿ**
ಭಗವತಿನಗರ, ಕಾಲೇಜು ಪೋಸ್ಟ್
ಮಡಿಕೇರಿ. ಮೊ : 9741009585

**ಪಾಣತ್ತಲೆ ಕಲ್ಪನಾ ರಾಘವಯ್ಯ**
ಸಿಂಗತ್ತೂರು ಗ್ರಾಮ, ಚೆಟ್ಟಿಮಾನಿ
ಭಾಗಮಂಡಲ - ಮಡಿಕೇರಿ
ಮೊ : 8277132131

**ಮಿಲನ ಕೆ. ಭರತ್**
C/o ಮಂಜುನಾಥ ಪ್ರೆಸ್, ಭಾಗಮಂಡಲ

**ಟಿ.ಪಿ. ಮಂಜುನಾಥ್**, ಕುಶಾಲನಗರ

**ಇ. ಸುಲೇಮಾನ್**
ಸಹಶಿಕ್ಷಕ, ಸರ್ಕಾರಿ ಪ್ರೌಢಶಾಲೆ
ಕಿರಗಂದೂರು ಅಂಚೆ
ಸೋಮವಾರಪೇಟೆ
ಮೊ : 9480557123

**ಸೌಮ್ಯ ಶೆಟ್ಟಿ ಬಿ.ಬಿ.**
W/o ಸದಾಶಿವ ರೈ ಪಿ.ಕೆ.
ಭಗವತಿನಗರ, ಮಡಿಕೇರಿ

**ದಿನೇಶ್ ಕೆ. ಕಾರ್ಯಪ್ಪ**
13-43 (1), ಗೌಳಿಬೀದಿ, ಮಡಿಕೇರಿ
ಕೊಡಗು ಜಿಲ್ಲೆ
ಮೊ : 9845499112
ದೂ :08272-228214

**ತೊರೆನೂರು ಸುಕುಮಾರ್**
ತೊರೆನೂರು ಗ್ರಾಮ
ಸೋಮವಾರಪೇಟೆ

**ಡಿ. ಸುಜಲಾದೇವಿ**
ಸುಪ್ರಜ ಗುರುಕುಲ, ಶನಿವಾರಸಂತೆ
ಸೋಮವಾರಪೇಟೆ - ಕೊಡಗು
ಮೊ : 9480376479, 9141692556

**ಡಾ. ಎ.ಎಲ್. ಚಂದ್ರಶೇಖರ್**
ಪ್ರಾಂಶುಪಾಲರು
ಜಿಲ್ಲಾ ತರಬೇತಿ ಸಂಸ್ಥೆ, ಮಡಿಕೇರಿ

**ಕಾಜೂರು ಸತೀಶ್**
ಶಿಕ್ಷಕರು, ಕರಿಕೆ

**ರಾಘುವೇಂದ್ರ ಹೆಚ್.ಎ.**
ಕನ್ನಡ ಭಾಷಾ ಶಿಕ್ಷಕರು
C/o ಬಾಚೆಟ್ಟಿರ ಲಾಲು ಮುದ್ದಯ್ಯ
ಮೂರ್ನಾಡು ಅಂಚೆ
ಮಡಿಕೇರಿ - ಕೊಡಗು ಜಿಲ್ಲೆ

**ಜಾನ್ ಸುಂಟಿಕೊಪ್ಪ**
ಸ. ಶಿಕ್ಷಕರು, ಸ.ಕಿ.ಪ್ರಾ.ಶಾಲೆ
ಯವಕಪಾಡಿ, ಮಡಿಕೇರಿ
ಮೊ : 9686960182

**ಸಹನಾ ಕಾಂತಬೈಲು**
ಬಾಲಂಬಿ ಅಂಚೆ, ಮಡಿಕೇರಿ
ಮೊ : 9008196522

**ಎಂ.ಪಿ. ಪುಷ್ಪಲತ ಶಿವಪ್ಪ**
ಶಿವಕೃಪ ಕಂಪ್ಯೂಟರ್ ಟೈಪಿಂಗ್ ಸೆಂಟರ್
ಕರ್ನಾಟಕ ಸಂಘ ಕಟ್ಟಡ
ವೀರಾಜಪೇಟೆ

**ಅಬ್ದುಲ್‌ರಶೀದ್ ಪಿ.ಎ.**
ಕೊಳಕೇರಿ, ಮಡಿಕೇರಿ - ಕೊಡಗು
ಮೊ : 9620751393

**ಎನ್. ಮಹೇಶ್**
ಕೂಡ್ಲೂರು ಚೆಟ್ಟಳ್ಳಿ ಗ್ರಾಮ & ಅಂಚೆ
ಅಂಚೆಪೆಟ್ಟಿಗೆ ಸಂ. 25
ದ. ಕೊಡಗು - 571248
ಮೊ : 8277235246

**ಸಂದೇಶ್ ಜೋಸೆಫ್ ಡಿಸೋಜ**
ವಿಕ್ಟರ್ ಜೆಕ್ಸ್, ನೆಟ್ಲಿ ಬಿ. ಎಸ್ಟೇಟ್
ಕಾನ್‌ಬೈಲ್, ಬೈಚನಹಳ್ಳಿ ಪೋಸ್ಟ್
ಸುಂಟಿಕೊಪ್ಪ, ಮಡಿಕೇರಿ - ಕೊಡಗು
ಮೊ : 9611222207, 0821-6554849

**ಮಳುವಂಡ ನಳಿನಿಬಿಂದು**
ಅರಮೇರಿ ಗ್ರಾಮ & ಅಂಚೆ
ವೀರಾಜಪೇಟೆ
ಮೊ : 8762303707

**ನಾಯಕಂಡ ಬೇಬಿ ಚಣ್ಣಪ್ಪ**
"ಮಧುನಿಲಯ"
ಕೆ. ಬೋಯಿಕೇರಿ ಅಂಚೆ
ವೀರಾಜಪೇಟೆ

**ಇಟ್ಟೀರ ಕೆ. ರಾಜಪ್ಪ**
ತೂಚಮಕೇರಿ ಗ್ರಾಮ
ಚಿಕ್ಕಮಂಡೂರು ಪೋಸ್ಟ್
ದ. ಕೊಡಗು - 571216
ದೂ : 206183

**ಮುಲ್ಲೇಂಗಡ ರೇವತಿ ಪೂವಯ್ಯ**
ಉಪನ್ಯಾಸಕಿ ಕನ್ನಡ ವಿಭಾಗ
ಕಾವೇರಿ ಕಾಲೇಜ್, ವೀರಾಜಪೇಟೆ - 571218
ಮೊ : 9480905756

**ಮೇರಿಯಂಡ ಸುಮಾ ಅಯ್ಯಪ್ಪ**
C/o ಎಂ.ಎಸ್. ರೀಟಾ
ಚಿಕ್ಕಪೇಟೆ, ವೀರಾಜಪೇಟೆ - 571218
ಮೊ : 8277131760

**ಕೊಂಗಿರಂಡ ದಮಯಂತಿ ಕುಶಾಲಪ್ಪ**
'ಶಿವಕೃಪ', 14ನೇ ಬ್ಲಾಕ್
ಹೊಸ ಬಡಾವಣೆ, ಮಡಿಕೇರಿ
ಮೊ : 9449402192

**ಎಂ.ಕೆ. ನಳಿನಾಕ್ಷಿ**
ಬೀರಂಗಾಡ್ ಲೇ ಔಟ್
ಚಿಕ್ಕಪೇಟೆ, ವೀರಾಜಪೇಟೆ - 571218
ಮೊ : 9611018818

**ಕುಮಾರ ಸ್ವಾಮಿ ಟಿ.ಬಿ.**
ಮುತ್ತಾರ್ಮುಡಿ ಗ್ರಾಮ, ಮೂರ್ನಾಡು
ಅಂಚೆ, ಮಡಿಕೇರಿ - 571 252
ಮೊ. : 9483234335

**ಲೋಕೇಶ್ ಊರುಬೈಲು**
S/o ಬಾಲಚಂದ್ರ ಯು.ಕೆ., ಊರುಬೈಲು
ಮನೆ, ಚೆಂಬು ಗ್ರಾಮ, ಕೊಯನಾಡು
ಅಂಚೆ, ಮಡಿಕೇರಿ, ಮೊ: 9611355496

**ಕಡ್ಲೇರ ತುಳಸಿ ಮೋಹನ್**
ಬೆಟ್ಟಗೇರಿ ಗ್ರಾಮ ಮತ್ತು ಅಂಚೆ
ಮಡಿಕೇರಿ ತಾ., ಮೊ. 9483110940

**ಆಶಾ ಧರ್ಮಪಾಲ ಪ್ರಭು**
ನಾರ್ತ್ ಕೂರ್ಗ್ ಕ್ಲಬ್ ಕಾಂಪ್ಲೆಕ್ಸ್
ಮುಖ್ಯರಸ್ತೆ, ಮಡಿಕೇರಿ

**ಕಡ್ಲೇರ ಜಯಲಕ್ಷ್ಮಿ ಮೋಹನ್‌ಕುಮಾರ್**
w/o ಮೋಹನ್‌ಕುಮಾರ್ ಕೆ.ಪಿ.
ಬೆಟ್ಟಗೇರಿ ಗ್ರಾಮ ಮತ್ತು ಅಂಚೆ
ಮಡಿಕೇರಿ - 571 201
ದೂ.: 968649155

**ಬಾರಿಯಂಡ ಜೋಯಪ್ಪ**
ಮದೆನಾಡು ಗ್ರಾಮ ಮತ್ತು ಅಂಚೆ

**ಪುದಿಯ ನೆರವನ ರೇವತಿ ರಮೇಶ**
ಕಿರಣ್‌ಗೇಟ್, ಕನ್ನಂಡಬಾಣೆ ರಸ್ತೆ
ಗೌಡಸಮಾಜ ಹತ್ತಿರ, ಮಡಿಕೇರಿ
ದೂ. : 9663254829

**ಹೆಚ್.ವಿ. ಸುನಿತಾ ವಿಶ್ವನಾಥ್**
W/o ಹೆಚ್.ಎಸ್. ವಿಶ್ವನಾಥ್
ಬೆಟ್ಟಗೇರಿ ಗ್ರಾಮ & ಅಂಚೆ
ಬೆಟ್ಟಗೇರಿ, ಮಡಿಕೇರಿ- ಕೊಡಗು
ಮೊ : 9900708572

ಅಬ್ದುಲ್ಲಾ, ಮಡಿಕೇರಿ
ಮೊ : 9844066582

**ಎಂ.ಇ. ಮಹಮದ್**
ಪತ್ರಕರ್ತ, ಮಡಿಕೇರಿ
ಮೊ : 9448448698

**ಬಿ.ಎಸ್. ಸತೀಶ್, ಎಂ.ಎ.ಬಿ.ಇ.ಡಿ.,**
ನಾಕೂರು ಗ್ರಾಮ, ಕಾನ್‌ಬೈಲ್ ಅಂಚೆ
ಸುಂಟಿಕೊಪ್ಪ, ಮೊ : 9481114557

**ಎಚ್. ಭೀಮರಾವ್ ವಾಷ್ಠರ್ (ಶಾಸ್ತ್ರಿ)**
ಸಾಹಿತಿಗಳು, ಹವ್ಯಾಸಿ ಪತ್ರಕರ್ತರು
ಜ್ಯೋತಿಷ್ಯ ಪಂಡಿತರು
ರಾಷ್ಟ್ರಜಾಗೃತಿ ವಾರಪತ್ರಿಕೆ
ಮಹದೇವಪೇಟೆ, ಮಡಿಕೇರಿ
ಮೊ : 9845309239

**ಸಬಲಂ ಭೋಜಣ್ಣ ರೆಡ್ಡಿ**
ಕುಶಾಲನಗರ - ಕೊಡಗು

**ಚಾರ್ಲ್ಸ್ ಡಿಸೋಜ**
ಉಪನ್ಯಾಸಕರು
ಅಪ್ಪಯ್ಯ ಸ್ವಾಮಿ ರಸ್ತೆ, ವೀರಾಜಪೇಟೆ

**ಸುಚಿತ್ರ ಸಿ.**
No. 98 ಶಾಂತಿನಿಕೇತನ
ಜಿ.ಟಿ. ರಸ್ತೆ, ಮಡಿಕೇರಿ
ಮೊ : 9632464244

**ವಿನೀತ್ ಲೋಭೊ**
ಶಾಂತಿನಿಕೇತನ್ ಲೇನ್,
ಕೆ.ಎಸ್.ಆರ್.ಟಿ.ಸಿ. ಹತ್ತಿರ, ಮಡಿಕೇರಿ
ಮೊ : 9449997335

**ಚೇತನ್ ಕೆ.ಸಿ.**
5ನೇ ತರಗತಿ, ಸ.ಕಿ.ಪ್ರಾ.ಶಾಲೆ
ಕೂಡ್ಲೂರು, ಕೊಡ್ಲಿಪೇಟೆ

**ಅಭಿಜ್ಞ ಆರ್. ಕೆದಿಲಾಯ**
5ನೇ ತರಗತಿ 'ಎ'
ಸೆಂಟ್ ಥೋಮಸ್ ಶಾಲೆ
ಗೋಣಿಕೊಪ್ಪ - 571213
ದ. ಕೊಡಗು

**ಡಯಾನ ಆ್ಯಂಟನಿ**
ದ್ವಿತೀಯ ಪಿಯುಸಿ, ಕಲಾವಿಭಾಗ
ಸಂತ ಜೋಸೆಫರ ಕಾಲೇಜು
ಮಡಿಕೇರಿ

**ಶ್ರೀಜಾ ದಯಾನಂದ ಕೆ.**
7ನೇ ತರಗತಿ 'ಎ'
ಸೆಂಟ್ ಜೋಸೆಫ್ ಕಾನ್ವೆಂಟ್,
ಮಡಿಕೇರಿ

**ಮುತ್ತಣ್ಣ ಬಿ.ಡಿ.**
ಅಂಚೆ ಕಛೇರಿ ಸಂ. 87
ಪಾಲಿಬೆಟ್ಟ
ದ. ಕೊಡಗು - 571215

**ಓಂಕಾರ್ ಕಾರ್ತಿಕೇಯನ್ ಎಂ.ಎಸ್.**
7ನೇ ತರಗತಿ
ವಿನಾಯಕ್ ಇಂಗ್ಲೀಷ್ ಶಾಲೆ
ವೀರಾಜಪೇಟೆ

**ಇಂಚರ ಎಂ.ಎಸ್.**
4ನೇ ತರಗತಿ
ಕೇಂದ್ರೀಯ ವಿದ್ಯಾಲಯ
ಸುದರ್ಶನ ವೃತ್ತ, ಮಡಿಕೇರಿ - 571201
ಮೊ : 9449405609

**ಕೃತಜ್ಞ ಬೆಸೂರ್**
4ನೇ ತರಗತಿ
ಬೆಸೂರು ಗ್ರಾಮ ಮತ್ತು ಅಂಚೆ
ಕೊಡ್ಲಿಪೇಟೆ ಹೋಬಳಿ - 571231
ಸೋಮವಾರಪೇಟೆ

**ಎಂ.ಇ. ಮನೋಜ್**
S/o ಎಂ.ಎ. ಈರಪ್ಪ
13/98 ರಾಜಾಸೀಟ್ ಸಮೀಪ
ರೇಸ್‌ಕೋರ್ಸ್ ರಸ್ತೆ,
ಮಡಿಕೇರಿ - 571201
ಮೊ : 9482930531

ಮಡಿಕೇರಿ ದಸರಾ ಬಹುಭಾಷಾ ಕವಿಗೋಷ್ಠಿ ಸಮಿತಿ - 2012

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ

'ವೇದಾಂತಿ ಹೇಳಿದನು.... ಹೊನ್ನೆಲ್ಲ ಮಣ್ಣು ... ಮಣ್ಣು ...
ಕವಿಯೊಬ್ಬ ಹಾಡಿದನು ಮಣ್ಣೆಲ್ಲ ಹೊನ್ನು... ಹೊನ್ನು...'

'ರವಿ ಕಾಣದ್ದನ್ನು ಕವಿ ಕಂಡ' ಎಂಬ ನಾಣ್ಣುಡಿಯಂತೆ
ಕವಿ ಹೃದಯಕ್ಕೆ ಮಣ್ಣು ಕೂಡ ಹೊನ್ನಾಗಿ ಕಾಣುತ್ತದೆ.
ಕಸಗಳು ರಸವಾಗುತ್ತವೆ. ಜಗತ್ತು ಸುಂದರವಾಗುತ್ತವೆ.
ಬದುಕು ದುಸ್ತರವಾಗುತ್ತವೆ. ಕವಿ ಹೃದಯದ
ಭಾವನೆಗಳು ನಿಜ ಜೀವನದ ಕೈಗನ್ನಡಿಯಾಗುತ್ತವೆ.

ಕವಿ ಹೃದಯಗಳ ಭಾವನೆಗಳನ್ನು ಬಚ್ಚಿಡಲು ಅಸಾಧ್ಯ...,
ಅದರಂತೆ ಭಾವನೆಗಳಿಂದ ಹೊರ ಹೊಮ್ಮಿದ ಹೃದಯಗಳ
ತುಡಿತವೇ ಈ ಕಾವ್ಯ ಲಹರಿ...

– ಕುಡೆಕಲ್ ಸಂತೋಷ್